ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 ಸಂಚಿಕೆ 28 ಜುಲೈ 12, 1981 ಬೆಲೆ : 60 ಪೈಸೆ

ಖಂಡನೀಯ ಕಾರ್ಮಿಕ ನೀತಿ

ಕರ್ನಾಟಕ ಸರಕಾರ ಕಾರ್ಮಿಕ ಕ್ಷೇತ್ರದಲ್ಲಿ ಅನುಸರಿಸುವ ಧೋರಣೆಯು ತೀವ್ರ ಖಂಡನೀಯವಾಗಿದೆ. ವಾಸ್ತವವಾಗಿ ಕಾರ್ಮಿಕ ಸಂಘಗಳಿಗೆ ತಮ್ಮ ದೈನಂದಿನ ಚಟುವಟಿಕೆಗಳನ್ನು ನಡೆಸುವುದಕ್ಕೂ, ಸಂಘಗಳಿಗೆ ಚುನಾವಣೆ ನಡೆಸಲಿಕ್ಕೂ ಅವಕಾಶವೇ ಇಲ್ಲದಂತಾಗಿದೆ. ಕಾರ್ಮಿಕ ವಿರೋಧಿ ಶಕ್ತಿಗಳಿಗೂ, ಇತರ ದುಷ್ಟ ಶಕ್ತಿಗಳಿಗೂ ಎಲ್ಲ ಪ್ರೋತ್ಸಾಹಗಳೂ ಸಿಗುತ್ತಿದ್ದು ಕಾರ್ಮಿಕ ಸಂಘಟನೆಯ ಮೂಲಭೂತ ಅಸ್ತಿತ್ವಕ್ಕೆ ಧಕ್ಕೆ ಬಂದಿದೆ.

ಕೇಂದ್ರ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳ ಸಹಸ್ರಾರು ಕಾರ್ಮಿಕರು ದೀರ್ಘಕಾಲದ ಧೀರ ಹೋರಾಟ ನಡೆಸಿದರು. ಆದರೆ ಮುಷ್ಕರವು ಅಂತ್ಯಗೊಂಡು ತಿಂಗಳ ಮೇಲಾದರೂ ಮ್ಯಾನೇಜ್‌ಮೆಂಟಿನವರು ಟ್ರೇಡ್ ಯೂನಿಯನ್ ಕಾರ್ಯಕರ್ತರ ಮೇಲೂ, ನಾಯಕರ ಮೇಲೂ ದಬ್ಬಾಳಿಕೆ ನಡೆಸುತ್ತಿದ್ದಾರೆ. ಅನೇಕರನ್ನು ಕೆಲಸದಿಂದ ವಜಾ ಮಾಡಲಾಗಿದೆ. ಖಟ್ಲೆಗಳು ನೂರಾರು ಜನರ ಮೇಲಿವೆ. ಈಗ ಬೆಮೆಲ್ (ರೈಲ್ ಕೋಚ್) ಬೆಂಗಳೂರು ವಿಭಾಗದ ಕಾರ್ಮಿಕ ಸಂಘದ ಪ್ರಧಾನಕಾರ್ಯದರ್ಶಿಯಾದ ಕಾಂ. ಶ್ರೀನಿವಾಸಮೂರ್ತಿಯವರನ್ನು ಯಾವ ಕಾರಣವನ್ನೂ ಕೊಡದೆ ಏಕಾಏಕಿಯಾಗಿ ವಜಾ ಮಾಡಲಾಗಿದೆ. ಇದು ಯಾವ ನ್ಯಾಯ? ಕಾರ್ಖಾನೆಗಳೊಳಗೆ ಕಾರ್ಮಿಕರನ್ನು ಕೈದಿಗಳಿಗಿಂತ ಕಡೆಯಾಗಿ ನೋಡಲಾಗುತ್ತಿದೆ. ಮುಖ್ಯಮಂತ್ರಿ ಗುಂಡೂರಾಯರು ಕೊಟ್ಟ ಆಶ್ವಾಸನೆಗಳೆಲ್ಲ ಎಲ್ಲಿ ಹೋದವು?

ಸಂಪಾದಕೀಯ

ವೈಕೋ ಕಾರ್ಖಾನೆಯ ಕಥೆಯನ್ನಂತೂ ಹೇಳಬೇಕಾಗಿಲ್ಲ. ಕಳೆದೆರಡು ವರ್ಷಗಳಲ್ಲಿ ಅವರು ತಮ್ಮ ಬೇಡಿಕೆಗಳಿಗಾಗಿ ಹೋರಾಟ ನಡೆಸಿದ್ದಲ್ಲದೆ ಬೆಂಗಳೂರಿನ ಕಾರ್ಮಿಕ ವರ್ಗಕ್ಕೆ ಮಾದರಿಯಾಗಿ ಎಲ್ಲ ಹೋರಾಟಗಳಲ್ಲೂ ಭಾಗವಹಿಸಿದ್ದರು. ಈಗ ಅವರನ್ನು ತುಳಿದು ಗುಲಾಮರನ್ನಾಗಿ ಮಾಡಲು ಎಫ್. ಎಂ. ಖಾನ್‌ರವರ ಗೂಂಡಾಪಡೆಗೆ ಎಲ್ಲ ಅವಕಾಶಗಳನ್ನು ಕೊಟ್ಟು ಕಾರ್ಮಿಕರು ಮಾತೆತ್ತದಂತ ಪರಿಸ್ಥಿತಿಯನ್ನು ನಿರ್ಮಿಸಲಾಗಿದೆ. ಸಂಘಕ್ಕೆ ಚುನಾವಣೆ ನಡೆಯಬೇಕೆಂದು ಲೇಬರ್ ಇಲಾಖೆಯು ಸರಕಾರಕ್ಕೆ ತಿಳಿಸಿದ್ದರೂ ಅದು ನಡೆಯುತ್ತಿಲ್ಲ. ಕಾರ್ಮಿಕ ಸಂಘದ ಪದಾಧಿಕಾರಿಗಳನ್ನು ಕೆಲಸದಿಂದ ವಜಾಮಾಡಿ ಭಯೋತ್ಪಾದಕ ಪರಿಸ್ಥಿತಿ ಕಾರ್ಖಾನೆಯೊಳಗಿದೆ. ಇದು ಯಾವ ಪ್ರಜಾಪ್ರಭುತ್ವ?

ರಾಜ್ಯದ ಇತರ ಕಡೆಗಳಲ್ಲೂ ಐ.ಎನ್.ಟಿ.ಯು.ಸಿ ಯವರ ಧಾಳಿ ಇತರ ಸಂಘಗಳ ಮೇಲೆ ನಿರಂತರ ನಡೆಯುತ್ತಿದೆ. ಈ ಧಾಳಿ ನಿಲ್ಲಬೇಕು; ಸಂಘಗಳನ್ನು ನಡೆಸಲು ಸಂಪೂರ್ಣ ಸ್ವಾತಂತ್ರ್ಯವಿರಬೇಕು. ಎಲ್ಲ ಕಾರ್ಮಿಕ ನಾಯಕರನ್ನೂ ಪುನಃ ಕೆಲಸಕ್ಕೆ ತೆಗೆದುಕೊಳ್ಳಬೇಕು. ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳಲ್ಲಿ ಮುಷ್ಕರದ ಸಂಬಂಧ ವಜಾ ಆದವರನ್ನೆಲ್ಲಾ ಕೆಲಸಕ್ಕೆ ತೆಗೆದುಕೊಳ್ಳಬೇಕು; ಹಾಗೆನೇ ವೈಕೋ ಮತ್ತಿತರ ಕಡೆಗಳಲ್ಲೂ ವಜಾ ಆದ ಕಾರ್ಮಿಕರ ಮೇಲಿನ ಕ್ರಮ ರದ್ದಾಗಲಿ. ವೈಕೋ ಯೂನಿಯನ್‌ಗೆ ಚುನಾವಣೆ ಕೂಡಲೇ ನಡೆಯಲಿ. ಕಾರ್ಮಿಕ ವಿರೋಧಿ ನೀತಿಯನ್ನು ಸರಕಾರ ಬದಲಿಸಲೇಬೇಕು. ರಾಜ್ಯದ ಎಲ್ಲ ಕಾರ್ಮಿಕ ಸಂಘಗಳೂ ಇತರ ಪ್ರಜಾಪ್ರಭುತ್ವ ಶಕ್ತಿಗಳೂ ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸುವರೆಂದು ಹಾರೈಸುತ್ತೇವೆ. ●

ಬಡಜನರ ಸಾಮೂಹಿಕ ಕಗ್ಗೊಲೆ

ಬೆಂಗಳೂರಲ್ಲಿ ಕಳ್ಳಭಟ್ಟಿ ದುರಂತ

ಜುಲೈ 7ರಂದು ಬೆಂಗಳೂರಿನಲ್ಲಿ ವಿಷಮಿಶ್ರಿತ ಸಾರಾಯಿ ಕುಡಿದು ಅಪಾರ ಸಂಖ್ಯೆಯಲ್ಲಿ ಸಾವುನೋವುಂಟಾಗಿದೆ. ದುರಂತಕ್ಕೆ ಬಲಿಯಾದವರಲ್ಲಿ ಮಹಿಳೆಯರೂ ಸೇರಿ ಸುಮಾರು 250 ಜನ ನಿಧನರಾಗಿರುವುದು ಆಘಾತಕರವಾದುದು. ಸರಕಾರದ ಮೂಗಿನಡಿಯಲ್ಲೇ ಈ ದುರಂತ ನಡೆದಿದೆ.

ಈ ಬಗೆಯ ಘಟನೆ ಇದೇ ಮೊದಲನೆಯದ್ದಲ್ಲ. ಬೃಹತ್ ಪ್ರಮಾಣದಲ್ಲಿ ಸಾವುನೋವುಂಟಾಗಿರುವುದು ಸರಕಾರದ ಅದಕ್ಷತೆಯನ್ನು ಎತ್ತಿ ತೋರಿಸುತ್ತದೆ. ಈ ಘಟನೆಯ ತೆರೆಮರೆಯಲ್ಲಿ ಪಟ್ಟಭದ್ರ ಹಿತಾಸಕ್ತಿಗಳ ಕೈವಾಡವಿರುವುದು ಸ್ಪಷ್ಟ.

ಕಳ್ಳಭಟ್ಟಿ ವ್ಯಾಪಾರ ಕಾನೂನು ರೀತ್ಯ ಅಪರಾಧವಾಗಿದ್ದರೂ, ರಾಜ್ಯದಲ್ಲೆಲ್ಲ ಅಪಾರ ಪ್ರಮಾಣದಲ್ಲಿ ಪೋಲೀಸರ ಕೃಪಾಛತ್ರದಲ್ಲಿಯೇ ಕಳ್ಳಭಟ್ಟಿ ತಯಾರಾಗುವುದು ಎಲ್ಲರಿಗೂ ಗೊತ್ತಿರುವ ವಿಷಯ. ನ್ಯಾಯಬದ್ಧ ಸಾರಾಯಿ ಅಂಗಡಿಗಳಲ್ಲಿ ಸಾರಾಯಿಯ ಬೆಲೆ ಹೆಚ್ಚಾಗಿದ್ದರಿಂದ ಬಡಜನತೆ ಕಳ್ಳಭಟ್ಟಿಗೆ ಶರಣಾಗುತ್ತಿರುವುದು ಕಂಡುಬರುವುದು. ಅಂದರೆ ರಾಜ್ಯದಲ್ಲಿ ನಡೆದ ಈ ದುರಂತಕ್ಕೆ ಸರಕಾರವೇ ಕಾರಣವಾಗಿರುವುದು

ಈ ಭಯಾನಕ ಘಟನೆಯಲ್ಲಿ ಸಾವಿಗೀಡಾದವರು ಹೆಚ್ಚಿನ ಜನ ಕೊಳಚೆ ನಿವಾಸಿಗಳು. ಮನೆಯ ಆಶ್ರಯದಾತರನ್ನು, ಗಂಡಂದಿರನ್ನು, ಮಕ್ಕಳನ್ನು ಕಳೆದುಕೊಂಡವರ ಆಕ್ರಂದನ ಕರಳು ಕತ್ತರಿಸುವಂಥದ್ದು.

ಸರಕಾರವೇನೋ ನಿಧನರಾದವರಿಗೆ 1000 ರೂ. ಪರಿಹಾರ, ಹಾಗೂ ಘಟನೆಯನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಿದ್ದಾರೆ. ಆಸ್ಪತ್ರೆಯಿಂದ ಶವಗಳನ್ನು ಸಂಬಂಧಿಸಿದವರಿಗೆ ನೀಡಲೂ ಪೋಲೀಸರು ಲಂಚ ಸ್ವೀಕರಿಸುತ್ತಿರುವ ಸನ್ನಿವೇಶವಂತೂ ವಾಕರಿಕೆ ತರುವಂಥದ್ದು. ಅಬಕಾರಿ ಕಮೀಷನರರು ಶವಸಂಸ್ಕಾರವನ್ನು ಉಚಿತವಾಗಿ ಏರ್ಪಡಿಸುವ ಹೇಳಿಕೆ ನೀಡಿದ್ದರು. ಸ್ಮಶಾನದಲ್ಲಿ ಹೆಣ ಹೂಳಲೂ ಲಂಚ. ಮಾಮೂಲಿಗಿಂತ 3 ಪಟ್ಟು ಹೆಚ್ಚು ಹಣವಂತೆ. ಮಾನವೀಯತೆಯನ್ನು ಮರೆತ ಈ ರಾಕ್ಷಸರನ್ನು ಜನತೆ ವಿಚಾರಿಸಿಕೊಳ್ಳಬೇಕಾದೀತು.

ಕಳ್ಳಭಟ್ಟಿ ವ್ಯವಹಾರವನ್ನು ನಿರ್ಮೂಲನಗೊಳಿಸಿ ಸಂಬಂಧಿಸಿದ ಎಲ್ಲರ ಮೇಲೂ ಉಗ್ರ ಕ್ರಮಕೈಗೊಳ್ಳಲು ಸರಕಾರ ಮುಂದಾಗಬೇಕು. ಘಟನೆಯಿಂದ ನೊಂದ ಕುಟುಂಬಗಳ ಪುನರ್ವಸತಿಗೆ ಸರಕಾರ ಪೂರ್ತಿ ನೆರವಾಗಬೇಕು. ಇನ್ನೊಮ್ಮೆ ಈ ತರದ ದುರಂತ ನಡೆಯದಂತೆ ಎಚ್ಚರಿಕೆ ವಹಿಸಬೇಕು.

ನ್ಯಾಯಾಂಗ ತನಿಖೆ ನಾಮ್‌ಕಾವಾಸ್ತೆ ಆಗಕೂಡದು. ಬಡಜನತೆಯ ಸಾವಿಗೆ ಕಾರಣರಾದ ಪಾತಕಿಗಳು, ದ್ರೋಹಿಗಳನ್ನು ಕಂಡುಹಿಡಿದು ಉಗ್ರ ಶಿಕ್ಷೆವಿಧಿಸಬೇಕು. ತನಿಖೆ ನಿಷ್ಪಕ್ಷಪಾತವಾಗಿ ನಡೆದು ಯಾವ ಅಪರಾಧಿಯೂ ರಾಜಕೀಯ ಪುಢಾರಿಗಳಿಂದ ತಪ್ಪಿಸಿಕೊಳ್ಳುವಂತಾಗಬಾರದು.

[ಕಡೇ ಪುಟ ನೋಡಿ]

ಸದ್ಯದ ರಾಜಕೀಯ ಪರಿಸ್ಥಿತಿ

ಕೇಂದ್ರ ಸಮಿತಿಯ ಪತ್ರಿಕಾ ಹೇಳಿಕೆ

ಜೂನ್ 24 ರಿಂದ 28ರವರೆಗೆ ಕಲ್ಕತ್ತೆಯಲ್ಲಿ ಸಭೆ ಸೇರಿದ್ದ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಕೇಂದ್ರಸಮಿತಿಯು ಚೀನಾ ಜನತಾ ಗಣತಂತ್ರದ ಗೌರವ ಅಧ್ಯಕ್ಷೆ ಕಾಂ. ಸೂಂಗ್ ಚಿಂಗ್ ಲಿಂಗ್‌ರವರಿಗೆ ಶ್ರದ್ಧಾಂಜಲಿ ಅರ್ಪಿಸಿತು. ಅವರು ಚೀನಾದ ವಿಮೋಚನೆ ಹಾಗೂ ಚೀನಾದ ಸಮಾಜವಾದೀ ರಚನೆಯಲ್ಲಿ ಗಮನಾರ್ಹ ಪಾತ್ರ ವಹಿಸಿದ್ದರು.

ಕೇಂದ್ರಸಮಿತಿ ಪಕ್ಷದ 11ನೇ ಸಮ್ಮೇಳನವನ್ನು 1982 ರ ಜನವರಿ ಅಂತ್ಯದೊಳಗೆ ಆಂಧ್ರಪ್ರದೇಶದಲ್ಲಿ ನಡೆಸಲು ನಿರ್ಧರಿಸಿತು.

ಕೇಂದ್ರಸಮಿತಿ ಸದ್ಯದ ರಾಜಕೀಯ ಪರಿಸ್ಥಿತಿಯನ್ನು ವಿಮರ್ಶಿಸಿತು.

ಪ. ಬಂಗಾಳದ ಗೆಲುವು

ಮೇ ತಿಂಗಳ ಅಂತ್ಯದಲ್ಲಿ ನಡೆದ ನಗರಸಭಾ ಚುನಾವಣೆಗಳಲ್ಲಿ, ಜೂನ್ 14ರ ಉಪಚುನಾವಣೆಗಳಲ್ಲಿ ಎಡರಂಗ ಹಾಗೂ ಅದರ ಮಿತ್ರರು ಪಡೆದ ಗೆಲುವು ಎಡರಂಗ ಸರ್ಕಾರದ ಬಗ್ಗೆ ಜನರಿಗಿರುವ ಭರವಸೆಯನ್ನು ಸ್ಪಷ್ಟವಾಗಿ ತೋರ್ಪಡಿಸಿತು. ಈ ಮೂಲಕ ಕಾಂಗ್ರೆಸ್(ಐ)ನ ಸುಳ್ಳು ಪ್ರಚಾರ, ಕೊಲೆ, ಸುಲಿಗೆಗಳಿಗೆ ಸರಿಯಾದ ಪ್ರತ್ಯುತ್ತರ ಕೊಟ್ಟ ಪಕ್ಷದ ಪಶ್ಚಿಮ ಬಂಗಾಳ ಶಾಖೆಗೆ, ಅದರ ಎಡಪಂಥೀಯ ಮಿತ್ರ ಹಾಗೂ ಪಶ್ಚಿಮ ಬಂಗಾಲದ ಜನತೆಯನ್ನು ಕೇಂದ್ರ ಸಮಿತಿ ಶ್ಲಾಘಿಸಿದೆ.

ಇದೇ ಸಮಯದಲ್ಲಿ ಕಾಂಗ್ರೆಸ್(ಐ) ಅಧಿಕಾರದಲ್ಲಿದ್ದ ರಾಜ್ಯಗಳಲ್ಲಿನ ಉಪಚುನಾವಣೆಗಳ ಫಲಿತಾಂಶಕ್ಕಿಂತ ಇದು ಏಕ್‌ದಂ ಭಿನ್ನವಾಗಿದೆ. ಮತದಾನದ ಶೇಕಡಾವಾರನ್ನು ನೋಡಿದರೆ ಈ ನಾಲ್ಕು ಕಾಂಗ್ರೆಸ್(ಐ) ರಾಜ್ಯಗಳು ಪಶ್ಚಿಮ ಬಂಗಾಳಕ್ಕಿಂತ ಬಹಳ ಹಿಂದೆ ಇವೆ. ಈ ನಾಲ್ಕು ರಾಜ್ಯಗಳಲ್ಲಿ ಕಾಂಗ್ರೆಸ್(ಐ) ಗೆದ್ದಿರುವುದು ಜನತೆಗೆ ಅದರ ಬಗೆಗಿದ್ದ ಭರವಸೆಯಿಂದಲ್ಲ; ವಿರೋಧಪಕ್ಷಗಳ ಅನೈಕ್ಯತೆಯಿಂದ. ಇತ್ತೀಚಿನ ಪ. ಬಂಗಾಳ ಬಂದ್, ಕೇರಳದ ಎರಡನೇ "ವಿಮೋಚನಾ ಹೋರಾಟ", ಕೇರಳ ಹಾಗೂ ತಮಿಳುನಾಡಿನ ಸರಕಾರಗಳು ನೇಮಿಸಿದ ಸಮಿತಿಗಳು ಕಾರ್ಯನಿರ್ವಹಿಸುತ್ತಿರುವಾಗ ಕೇಂದ್ರೀಯ ನ್ಯಾಯಾಂಗ ಸಮಿತಿ ನೇಮಿಸಿದ್ದು ಇವೆಲ್ಲಾ ಸರ್ವಾಧಿಕಾರದ ದಿಕ್ಕಿನಲ್ಲಿ ಕಾಂಗ್ರೆಸ್(ಐ)ನ ಇನ್ನಷ್ಟು ಪ್ರಯತ್ನಗಳು. ವಿರೋಧ ಪಕ್ಷಗಳು ಸುಮಾರಾಗಿ ಕಾಂಗ್ರೆಸ್ಸೇತರ ಸರಕಾರಗಳನ್ನುರುಳಿಸುವ ಈ ಪ್ರಯತ್ನಗಳಿಗೆ ವಿರುದ್ಧವಾಗಿವೆಯೆಂಬುದು ತೃಪ್ತಿಯ ಸಂಗತಿ. ದೇಶದ ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳು ಆಡಳಿತ ಪಕ್ಷದ ಪ್ರಯತ್ನಗಳ ಬಗ್ಗೆ ಬಹಳ ಜಾಗರೂಕರಾಗಿರಬೇಕು.

[ಕಡೇ ಪುಟ ನೋಡಿ]



"...ಸಮಾಜದಲ್ಲಿ ಒಂದು ಭಾಗದವರು ಮಾತ್ರ ವಿದ್ಯಾಭ್ಯಾಸವನ್ನು ಪಡೆದು, ಹೆಚ್ಚಿನವರು ಶಿಕ್ಷಣವಿಲ್ಲದೆ ಇರುವಂಥ ಸಮಾಜವು ರಾಜಕೀಯ ಪಕ್ಷಗಳ ಶಾಪ ಗ್ರಸ್ತವಾದುದೆಂದು ಹೇಳಬಹುದು"

—ರವೀಂದ್ರನಾಥ್ ಟಾಗೋರ್

ಕಳೆದ ನಾಲ್ಕು ವರ್ಷಗಳಲ್ಲಿ ಪಶ್ಚಿಮ ಬಂಗಾಳದ ವಾಮಪಂಥೀಯ ಸರಕಾರದ ಚರಿತ್ರೆಯು ಜನಸಾಮಾನ್ಯರು ಹೊಸ ಜೀವನಕ್ಕೆ ಅಡಿಯಿಡುವ ಚರಿತ್ರೆಯೇ.

ಈ ವರ್ಷಗಳಲ್ಲಿ ಜನಸಾಮಾನ್ಯರ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಹಕ್ಕುಗಳನ್ನು ಪುರಸ್ಕರಿಸಿದುದೇ ಅಲ್ಲದೆ, ಶಿಕ್ಷಣ ಮತ್ತು ಸಂಸ್ಕೃತಿಯ ಕ್ಷೇತ್ರದಲ್ಲಿಯೂ ಉತ್ತಮ ಫಲದಾಯಕ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಈ ವರ್ಷಗಳಲ್ಲಿ, 12ನೇ ತರಗತಿವರೆಗೂ ವಿದ್ಯಾಭ್ಯಾಸವನ್ನು ಉಚಿತವಾಗಿ ನೀಡಲಾಗುತ್ತಿದೆ. 4600 ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಲಾಗಿದೆ. ಸುಮಾರು 2 ಲಕ್ಷ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ 3,800 ಹೆಚ್ಚುಮಂದಿ ಬೋಧಕರಿರುವರು. ಸರ್ಕಾರದ ನೆರವಿನಿಂದ 2,500 ಪುಸ್ತಕ ಭಂಡಾರಗಳು ಮತ್ತು 5,700 ವಯಸ್ಕರ ಶಿಕ್ಷಣ ಕೇಂದ್ರಗಳು ಅಸ್ತಿತ್ವಕ್ಕೆ ಬಂದಿವೆ. ಪ್ರಾಥಮಿಕ ಶಾಲೆಗಳ ಬೋಧಕರೆಲ್ಲರಿಗೂ, ಸೆಕೆಂಡರಿ ಶಾಲೆಗಳ ಬೋಧಕ ಹಾಗೂ ಬೋಧಕೇತರ ಹುದ್ದೆಗಳಿಗೆ ಮತ್ತು ಮದ್ರಾಸಸ್‌ಗೆ ಸರ್ಕಾರಿ ನೌಕರರಂತೆಯೇ ಹೆಚ್ಚಾದ ತುಟ್ಟಿ ಭತ್ಯ ನೀಡಲಾಗುತ್ತಿದೆ. ಪರಿಶಿಷ್ಟ ಜಾತಿ/ವರ್ಗಗಳು ಮತ್ತು ಇತರ ಆರ್ಥಿಕ ದುರ್ಬಲ ವರ್ಗಗಳ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳು, ತಿಂಡಿ, ಸಮವಸ್ತ್ರ ಇವನ್ನು ನೀಡಲು ವಿವಿಧ ಯೋಜನೆಗಳನ್ನು ಮಂಜೂರ್ಮಾಡಿದೆ. 6ನೇ ತರಗತಿ ವರೆಗೆ ವಿದ್ಯಾರ್ಥಿಗಳು ಗಣಿತಶಾಸ್ತ್ರದ ಪುಸ್ತಕಗಳನ್ನು ಉಚಿತವಾಗಿ ಪಡೆಯುವರು. ರಾಜ್ಯದ ಪೌಷ್ಟಿಕಾಹಾರ ಯೋಜನೆಯಂತೆ ಈ ವರ್ಷ 26ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಮಧ್ಯಾಹ್ನದ ಉಪಹಾರ ಪಡೆಯುವರು. ತಾಂತ್ರಿಕ ಶಿಕ್ಷಣದ ಯೋಜನೆಗಳಿವೆ. ಉರ್ದು ಭಾಷೆಯ ಅಭಿವೃದ್ಧಿಗಾಗಿ ಉರ್ದು ಅಕಾಡೆಮಿ ಸ್ಥಾಪಿಸಲ್ಪಟ್ಟಿದೆ.

ಸರ್ಕಾರದ ಸಹಾಯಧನದಿಂದ ಉನ್ನತ ಲೇಖಕರ ಬರವಣಿಗೆಗಳನ್ನು ಮುದ್ರಿಸಿ ಕಡಿಮೆ ಬೆಲೆಗೆ ನೀಡಲಾಗುತ್ತಿದೆ. ಸಾಹಿತ್ಯದಲ್ಲಿ ಮತ್ತು ಲಲಿತ ಕಲೆಗಳಲ್ಲಿ ಸೃಜನಶೀಲತೆಯನ್ನಭಿವೃದ್ಧಿಗೊಳಿಸಲು ಈಗಿರುವ ರವೀಂದ್ರ ಸ್ಮಾರಕ ಬಹುಮಾನ, ವಿದ್ಯಾಸಾಗರ ಸ್ಮಾರಕ ಬಹುಮಾನ ಮತ್ತು ಬಂಕಿಂ ಸ್ಮಾರಕ ಬಹುಮಾನಗಳ ಜೊತೆಗೆ ಅಬನೀಂದ್ರನಾಥ ಟಾಗೂರ್ ಪ್ರಶಸ್ತಿಯನ್ನೂ ಸೇರಿಸಲಾಗಿದೆ. ವೃದ್ಧ ಹಾಗೂ ಯುವ ಬರಹಗಾರರ ಕೃತಿಗಳ ಪ್ರಕಾಶನಕ್ಕೆ ಸಹಾಯಧನ ಕೊಡಲಾಗುತ್ತಿದೆ. ಆರ್ಥಿಕವಾಗಿ ತೊಂದರೆಗೀಡಾದ ಸಂಗೀತಗಾರರು ಮತ್ತು ಕಲಾವಿದರಿಗೆ ಆರ್ಥಿಕ ನೆರವು ನೀಡಲಾಗುತ್ತಿದೆ. ಜಾನಪದ, ಸಂಸ್ಕೃತಿ ಪುನರುದ್ಧಾರಕ್ಕಾಗಿ ಜಾರ್‌ಗ್ರಾಮ್ ಮತ್ತು ಸೂರಿ ಇಲ್ಲಿ ಎರಡು ಸಾಂಸ್ಕೃತಿಕ ಕೇಂದ್ರಗಳನ್ನು ಏರ್ಪಡಿಸಿದ್ದು, ವಿವಿಧ ಜಿಲ್ಲೆಗಳಲ್ಲಿ ಜನಪದ ಉತ್ಸವಗಳನ್ನು ಆಚರಿಸಲಾಗುತ್ತಿದೆ.

5ನೇ ತರಗತಿಗೆ ಮಾತೃಭಾಷೆಯನ್ನೇ ಶಿಕ್ಷಣ ಮಾಧ್ಯಮವನ್ನಾಗಿಸಿದೆ. 6ನೇ ತರಗತಿಯಿಂದ 12ರವರೆಗೆ ಇಂಗ್ಲೀಷನ್ನು ಕಡ್ಡಾಯ ದ್ವಿತೀಯ ಭಾಷೆಯಾಗಿ ಮಾಡಲಾಗಿದೆ. ಕೊಠಾರಿ ಆಯೋಗ ಮತ್ತು ಯುನೆಸ್ಕೋ ಭಾಷಾ ಡಾಕ್ಯುಮೆಂಟ್ಸ್‌ಗೆ ಅನುಸಾರ ವಾಮಪಂಥೀಯ ಸರ್ಕಾರದ ಭಾಷಾ ನೀತಿಯನ್ನು ರೂಪಿಸಲಾಗಿದೆ. ಹಿಂಸಾಚಾರದಿಂದ ದೂರವಾಗಿದ್ದು ಎಲ್ಲೆಡೆ ಈಗ ಉತ್ತಮ ವಾತಾವರಣವಿದೆ.

ಪಶ್ಚಿಮ ಬಂಗಾಳದ ಚಲನಚಿತ್ರ ಮತ್ತು ರಂಗಭೂಮಿಯ ಪುನಶ್ಚೇತನಕ್ಕೆ ವಾಮಪಂಥೀಯ ಸರ್ಕಾರವು ಸಮರ್ಪಕ ಕಾರ್ಯಕ್ರಮ ಹಾಕಿಕೊಂಡಿದೆ. ಅಗ್ರಗಣ್ಯ ಚಿತ್ರತಯಾರಕರಿಗೆ ಸಹಾಯಧನ, ವರ್ಣಚಿತ್ರ ಸಂಶೋಧನ ಶಾಲೆಯ ಸ್ಥಾಪನೆ, ಕೆಲಸ ಸ್ಥಗಿತಗೊಂಡಿರುವ ಸ್ಟುಡಿಯೋಗಳನ್ನು ವಹಿಸಿಕೊಳ್ಳುವಿಕೆ ಇವುಗಳೆಲ್ಲವೂ ಇದರಲ್ಲಿ ಸೇರಿದೆ.

ಕಲ್ಕತ್ತ ಬಿಟ್ಟು ಇತರ ಪಟ್ಟಣ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಚಿತ್ರಮಂದಿರಗಳ ನಿರ್ಮಾಣಕ್ಕಾಗಿ, ಎನ್‌ಎಫ್‌ಡಿಸಿ ಮತ್ತು ಕೆನರಾ ಬ್ಯಾಂಕಿನ ವತಿಯಿಂದ ಜಂಟಿ ಸಾಲದ ಯೋಜನೆ ರೂಪಿಸಲಾಗಿದೆ. ಎಂಬತ್ತೈದು ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ "ಆರ್ಟ್ ಫಿಲಿಂ ಥಿಯೇಟರ್ ಕಾಂಪ್ಲೆಕ್ಸ್" ಪ್ರಾಯೋಗಿಕ ಚಿತ್ರಗಳ ತಯಾರಿಕಾ ಕ್ಷೇತ್ರದಲ್ಲಿ ನಿರ್ದೇಶಕರಿಗೆ ಮತ್ತು ಕಲಿಯುವವರಿಗೆ ನೆರವಾಗುವುದು.

ಜನಪ್ರಿಯ ಜನಪದ ಕಲೆಗಳನ್ನು ಊರ್ಜಿತಗೊಳಿಸುವಲ್ಲಿ ಕೆಲಸ ಮಾಡುವ ವೃತ್ತಿ ಮತ್ತು ಹವ್ಯಾಸೀ ಜಾತ್ರಾ ಮತ್ತು ಗ್ರೂಪ್ ಥಿಯೇಟರ್‌ಗಳಿಗೆ ಪ್ರಶಸ್ತಿಗಳನ್ನು, ಹಣವನ್ನು ಮಂಜೂರ್ಮಾಡಿ ಪ್ರೋತ್ಸಾಹಿಸಲಾಗುತ್ತಿದೆ. ಸಿಸಿರ್ ಮಂಚ ಮತ್ತು ಅಹಿಂದ್ರ ಮಂಚ ಇವುಗಳ ಜೊತೆಗೆ ಗಿರೀಶ್ ಮತ್ತು ಮಧುಸೂಧನ್ ಮಂಚ ಎಂಬ ಇನ್ನೆರಡು ಥಿಯೇಟರ್‌ಗಳನ್ನೂ ಕಲ್ಕತ್ತದಲ್ಲಿ ನಿರ್ಮಿಸಲಾಗುತ್ತಿದೆ. ಜಿಲ್ಲೆಯಲ್ಲಿನ ರಬೀಂದ್ರ ಭವನಗಳ ಆಡಳಿತ ವಹಿಸಿಕೊಳ್ಳುವ ಬಗ್ಗೆ ಕಾರ್ಯ ನಡೆಸಲಾಗುತ್ತಿದೆ.

ಈ ಎಲ್ಲ ಕಾರ್ಯಗಳಿಂದ, ರಾಜ್ಯದ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಜೀವನಕ್ಕೆ ಹೊಸಕಳೆಯುಂಟಾಗುವುದು. ಉತ್ತಮ ಸಂಸ್ಕೃತಿಯ ಪಥಗಳನ್ನು ನಿರ್ಮಿಸುತ್ತ ಈ ಸರ್ಕಾರವು ತನ್ನ ಜನತೆಗೆ ಉತ್ತಮಕರ ನಾಳೆಯನ್ನು ನೀಡಲು ಪಣ ತೊಟ್ಟಿದೆ.

ಪಶ್ಚಿಮ ಬಂಗಾಳ ಸರ್ಕಾರ

ರಾವ್ ಸರಕಾರದ ವಿರುದ್ಧ ಹೋರಾಟಕ್ಕೆ ಕರೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯಸಮಿತಿಯ ಕಾರ್ಯದರ್ಶಿ ಮಂಡಳಿ (ಸೆಕ್ರೆಟಾರಿಯೆಟ್) ಮೇ 30, ಜೂನ್ 1 ಮತ್ತು 2 ರಂದು ಬೆಂಗಳೂರಿನಲ್ಲಿ ಸಭೆ ಸೇರಿ, ಈ ಮೂರು ದಿನಗಳ ಸಭೆಯಲ್ಲಿ ರಾಜ್ಯದ ಪ್ರಸಕ್ತ ರಾಜಕೀಯ ಪರಿಸ್ಥಿತಿಯನ್ನು ಸುದೀರ್ಘವಾಗಿ ಚರ್ಚಿಸಿ ಈ ಕೆಳಗಿನ ರಾಜಕೀಯ ನಿರ್ಣಯವನ್ನು ಕೈಗೊಂಡಿದೆ.

"ಕರ್ನಾಟಕ ರಾಜ್ಯದಲ್ಲಿ ಗುಂಡೂರಾವ್ ನೇತೃತ್ವದ ಕಾಂಗ್ರೈ ಸರಕಾರ ಅಧಿಕಾರಕ್ಕೆ ಬಂದಂದಿನಿಂದ ಜನವಿರೋಧಿ ಮತ್ತು ಸರ್ವಾಧಿಕಾರಿ ಧೋರಣೆಗಳನ್ನು ಅನುಸರಿಸುತ್ತಾ ಬಂದಿದೆ. ರೈತರ ಚಳುವಳಿಯನ್ನು ಹತ್ತಿಕ್ಕಲು ಪ್ರಯತ್ನಿಸಿದ ಗುಂಡೂರಾವ್ ಸರಕಾರವು ಈ ತನಕ ಸುಮಾರು ಅರುವತ್ತಕ್ಕಿಂತಲೂ ಹೆಚ್ಚು ನಿರಪರಾಧಿಗಳ ಜೀವಗಳನ್ನು ಬಲಿತೆಗೆದುಕೊಂಡಿದೆ. ಕೃಷಿ ಉತ್ಪನ್ನಗಳಿಗೆ ಸರಿಯಾದ ಲಾಭದಾಯಕ ಬೆಲೆಗಳನ್ನು ನಿಗದಿ ಮಾಡುವುದು, ರೈತರ ಸಾಲದ ಪ್ರಶ್ನೆ, ಬರಗಾಲ ಪ್ರದೇಶಗಳಲ್ಲಿ ತುರ್ತು ಪರಿಹಾರ ಕ್ರಮ ಮತ್ತು ದೀರ್ಘಕಾಲಿಕ ಕ್ರಮ, ಕೃಷಿಕೂಲಿಗಾರರ ಕನಿಷ್ಟ ವೇತನದ ಪ್ರಶ್ನೆ, ಭೂಮಿ ಇಲ್ಲದ ಬಡಜನರಿಗೆ ಭೂಮಿ ಹಂಚುವ ಪ್ರಶ್ನೆ, ಬೆಲೆಏರಿಕೆಯನ್ನು ತಡೆಗಟ್ಟಲು ಮತ್ತು ಜನತೆಗೆ ಅನುಕೂಲವಾಗುವಂತೆ ಮಾಡಲು ಹಳ್ಳಿಯಿಂದ ಮೊದಲ್ಗೊಂಡು ಪಟ್ಟಣದವರೆಗೆ ಸಾರ್ವಜನಿಕ ವಿತರಣಾ ವ್ಯವಸ್ಥೆ, ಇವಾವುದೇ ಪ್ರಶ್ನೆಗಳಿಗೆ ಸರಕಾರ ಗಮನವೇ ಇತ್ತಿಲ್ಲ. ಅಸಂಘಟಿತ ಕಾರ್ಮಿಕ ವರ್ಗಕ್ಕೆ ಜೀವನಾವಶ್ಯಕ ಕನಿಷ್ಟ ವೇತನ, ಕೆಲಸದ ಭದ್ರತೆಯಂತಹ ಕ್ರಮವಹಿಸುವುದಕ್ಕೆ ಬದಲು ರಾಜ್ಯ ಸರಕಾರವು ಕಾರ್ಮಿಕ ವಿರೋಧಿ ಧೋರಣೆಗಳನ್ನು ಅನುಸರಿಸುತ್ತಾ ಬಂದಿದೆ. ಸಂಘಟಿತ ಕಾರ್ಮಿಕರ ಚಳುವಳಿಗಳನ್ನು ಹತ್ತಿಕ್ಕಲು ಶ್ರಮಿಸಿದೆ. ಗೂಂಡಾಗಿರಿ ಮತ್ತು ಸರಕಾರಿ ಯಂತ್ರದ ಸಹಾಯದಿಂದ ಕಾರ್ಮಿಕ ಸಂಘಟನೆಗಳ ಮೇಲೆ ಧಾಳಿ, ವಿರೋಧ ಪಕ್ಷದ ಮೇಲೆ ಧಾಳಿ ನಡೆಯುತ್ತಾ ಬಂದಿದೆ. ಜನತೆಯ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಬದಲು, ನಾಗರಿಕ ಹಕ್ಕುಗಳನ್ನೇ ಕಬಳಿಸುವ ಯತ್ನ ನಡೆದಿದೆ. ಸುಗ್ರೀವಾಜ್ಞೆಗಳು, ಸತತವಾಗಿ ಜಾರಿಯಲ್ಲಿರುವ ಪ್ರತಿಬಂಧಕಾಜ್ಞೆಗಳು-ಇವೇ ಮೊದಲಾದ ಕ್ರಮಗಳಿಂದ ಪ್ರಜಾಪ್ರಭುತ್ವ ಹಕ್ಕುಗಳನ್ನು ಕಬಳಿಸಲಾಗಿದೆ. ವಿದ್ಯಾರ್ಥಿಗಳ ಸಮಸ್ಯೆಗಳು, ನಿರುದ್ಯೋಗ ಸಮಸ್ಯೆಗಳಿಂದಲಾಗಿ ಭವಿಷ್ಯವನ್ನು ರೂಪಿಸುವ ಬಾಲಬಾಲಕಿಯರು ಮತ್ತು ಯುವಜನತೆ ಕಂಗೆಟ್ಟಿದೆ.

ಆಡಳಿತೆ ನಡೆಸುವ ಕಾಂಗ್ರೈ ಮುಖಂಡರುಗಳನೇಕರು ಅನುಸರಿಸುವ ಕ್ರಮ ಭ್ರಷ್ಟಾಚಾರಕ್ಕೆ ಇನ್ನೂ ಪ್ರೋತ್ಸಾಹ ನೀಡಿದೆ. ಎಫ್. ಎಂ. ಖಾನ್, ಇಬ್ರಾಹಿಂ ಅವರುಗಳು ರಾಜ್ಯದ ಮುಖ್ಯಮಂತ್ರಿಯವರ ಬೆಂಬಲ ಮತ್ತು ಸರಕಾರಿ ಯಂತ್ರದ ಸಹಾಯದಿಂದ ನಡೆಸಿರುವ ಹೇಯ ಕೃತ್ಯಗಳು ಜನತೆಗೆ ದಿಗ್ಭ್ರಾಂತಿ ಹುಟ್ಟಿಸಿವೆ. ನಗರದ ಪೋಲೀಸ್ ಕಮೀಷನರಂತೂ ಕಾಂಗ್ರೈ ಪೋಲೀಸ್ ಕಮೀಷನರೇ ಆಗಿರುವಂತೆ ವರ್ತಿಸುತ್ತಿದ್ದಾರೆ. ನಿರ್ಭೀತಿಯಿಂದ ಸತ್ಯಾನ್ವೇಷಣೆ ಮಾಡಿರುವ ಪೋಲೀಸ್ ಅಧಿಕಾರಿಗಳ ಮೇಲೆ ಕ್ರಮತೆಗೆದುಕೊಳ್ಳಲಾಗುತ್ತಿದೆ! ಗುಂಡೂರಾವ್ ಸರಕಾರ ಆಳುವ ನೈತಿಕ ಹಕ್ಕನ್ನು ಕಳೆದುಕೊಂಡಿದೆ. ಜನತೆಯ ಅತೃಪ್ತಿ ಕಟ್ಟೆಯೊಡೆದು ಹೊರಬರುತ್ತಿದೆ.

ರಾಜ್ಯದ ಜನತೆಗೆ ಅತೃಪ್ತಿ ಹೆಚ್ಚಿರುವುದಾದರೂ ವಿರೋಧ ಪಕ್ಷಗಳ ಅನೈಕ್ಯತೆ ಮತ್ತು ಎಡ ಪ್ರಜಾಪ್ರಭುತ್ವ ಶಕ್ತಿಗಳ ನಿಶ್ಶಕ್ತಿಯಿಂದಲಾಗಿ ಜನತೆಯ ಅತೃಪ್ತಿಗೆ ಸರಿಯಾದ ಸಂಘಟಿತ ರೂಪ ಮತ್ತು ಮಾರ್ಗದರ್ಶನ ಕೊಡಲಾಗಲಿಲ್ಲ. ಇತ್ತೀಚೆಗಿನ ಧಾರವಾಡ ಗ್ರಾಮೀಣ ಪ್ರದೇಶ ವಿಧಾನಸಭಾ ಕ್ಷೇತ್ರದ ಉಪಚುನಾವಣಾ ಫಲಿತಾಂಶದಿಂದ ಇದು ಸ್ಪಷ್ಟವಾಗಿದೆ. ನಿರ್ದಿಷ್ಟ ಕಾರ್ಯಕ್ರಮದ ಆಧಾರದಲ್ಲಿ ಜನತೆಯನ್ನು ಒಗ್ಗೂಡಿಸಿ ಚಳುವಳಿ ನಡೆಸಿದರೆ ಜನತೆಯಲ್ಲಿ ಪ್ರಜ್ಞೆ ಮೂಡಿಸುವುದು ಸಾಧ್ಯವಿದೆ ಎಂಬುದನ್ನು ಸಿ.ಪಿ.ಐ., ಸಿ.ಪಿ.ಐ.(ಎಂ), ಕಾಂಗ್ರೆಸ್ (ಯು) ಮತ್ತು ಲೋಕದಳ ಪಕ್ಷಗಳು ಸೇರಿರುವ ಕರ್ನಾಟಕ ಪ್ರಗತಿಪರ ಜನತಂತ್ರರಂಗ ಸ್ವಲ್ಪಮಟ್ಟಿಗೆ ತೋರಿಸಿದೆ. ಕೆಲವು ಪಕ್ಷಗಳ ಚಂಚಲತೆಯಿಂದ ಈರಂಗದ ನೇತೃತ್ವದ ಚರಿತ್ರಾರ್ಹ ಚಳುವಳಿಯನ್ನು ಮುನ್ನಡೆಸುವ ಕೆಲಸ ಹಿಂದೆ ಬಿದ್ದಿದೆ. ಜನತಂತ್ರರಂಗಕ್ಕೆ ಜನತಾಪಕ್ಷವನ್ನು ಸೇರಿಸಿಕೊಂಡು, ಇದರ ತಳಹದಿಯನ್ನು ವಿಶಾಲಗೊಳಿಸಿ, ಜನರನ್ನು ಬಾಧಿಸುವ ಆರ್ಥಿಕ-ಸಾಮಾಜಿಕ-ರಾಜಕೀಯ ಸಮಸ್ಯೆಗಳ ಬಗ್ಗೆ ತತ್ವಬದ್ಧ ಹೋರಾಟ ನಡೆಸಲು ಮತ್ತು ಜನತೆಯ ಅತೃಪ್ತಿಗೆ ಸರಿಯಾದ ದಿಕ್ಕನ್ನು ತೋರಿಸಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಶ್ರಮಿಸುತ್ತದೆ. ಈ ದಿಸೆಯಲ್ಲಿ ಮುಂದುವರಿದುದೇ ಆದರೆ ರಾಜ್ಯದಲ್ಲಿ ಒಂದು ಎಡ ಪ್ರಜಾಪ್ರಭುತ್ವ ಶಕ್ತಿಗಳ ಬದಲಿ ಬೆಳೆಯಲು ಅವಕಾಶವಾಗಬಲ್ಲುದು. ಎಡ ಪ್ರಜಾಪ್ರಭುತ್ವ ಶಕ್ತಿಗಳು ಪ್ರಬಲವಾಗಿರುವಲ್ಲಿ ಮಾತ್ರ ಕಾಂಗ್ರೈ ಸರ್ವಾಧಿಕಾರಕ್ಕೆ ಸವಾಲು ಒಡ್ಡಿ ಪರಿಣಾಮಕಾರಿ ಫಲಿತಾಂಶ ತೋರಿಸುವುದು ಸಾಧ್ಯ ಎಂಬುದು ಇತ್ತೀಚೆಗಿನ ಚುನಾವಣೆಗಳಿಂದ ಸ್ಪಷ್ಟವಾಗಿದೆ.

ಎಡಶಕ್ತಿಗಳೊಂದಿಗೆ ಸೇರಿ, ಎಡ ಪ್ರಜಾಪ್ರಭುತ್ವ ಶಕ್ತಿಗಳ ಒಗ್ಗಟ್ಟಿನ ಆಧಾರದಲ್ಲಿ ಪರ್ಯಾಯಶಕ್ತಿಯನ್ನು ಬೆಳೆಸಲು ಶ್ರಮಿಸುವುದರೊಂದಿಗೆ ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಯಂತಹ ಕ್ರಮ ಅಥವಾ ಇನ್ನಾವುದೇ ಅದೇ ರೀತಿಯ ಸಮಸ್ಯೆಗಳು ಉಬ್ಬವಿಸಿದಾಗಲೆಲ್ಲಾ ಎಲ್ಲಾ ವಿರೋಧ ಪಕ್ಷಗಳು ಮತ್ತು ಶಕ್ತಿಗಳು ಒಂದುಗೂಡಿ ವಿಶಾಲ ತಳಹದಿಯ ಒಗ್ಗಟ್ಟಿನಲ್ಲಿ ನಡೆಸುವ ಹೋರಾಟಗಳಿಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಸಂಪೂರ್ಣ ಬೆಂಬಲ ನೀಡುತ್ತದೆ ಮತ್ತು ತಾನೂ ಭಾಗವಹಿಸುತ್ತದೆ. ಆದುದರಿಂದ ರಾಜ್ಯದಲ್ಲಿ ಇಬ್ರಾಹಿಂ ಹಗರಣ ಮತ್ತಿತರ ಸಮಸ್ಯೆಗಳ ಮೇಲೆ ಸಧ್ಯ ರಾಜ್ಯದಲ್ಲಿ ಬೆಳೆದುಬರುತ್ತಿರುವ ಪ್ರತಿಭಟನೆಗೆ ಸಿ.ಪಿ.ಐ.(ಎಂ) ತನ್ನೆಲ್ಲಾ ಬೆಂಬಲವನ್ನು ಕೊಡುತ್ತದೆ.

ಕೇವಲ ಇಬ್ರಾಹಿಂ ಅವರ ರಾಜಿನಾಮೆ ಮಾತ್ರವೇ ಅಲ್ಲ, ಗುಂಡೂರಾವ್ ಅವರೇ ರಾಜಿನಾಮೆ ಕೊಡಬೇಕೆಂದು ಸಿ.ಪಿ.ಐ.(ಎಂ) ಸೆಕ್ರೆಟಾರಿಯೆಟ್ ಒತ್ತಾಯಿಸುತ್ತದೆ. ಹಾಗೆಯೇ ನಗರ ಪೋಲೀಸ್ ಕಮೀಷನರನ್ನು ಕೆಲಸದಿಂದ ವಜಾ ಮಾಡಬೇಕೆಂದೂ, ಎಫ್.ಎಂ. ಖಾನ್ ಪ್ರಕರಣವನ್ನು ಹೈಕೋರ್ಟ ನ್ಯಾಯಾಧೀಶರ ಮೂಲಕ ನ್ಯಾಯಾಂಗ ತನಿಖೆಗೆ ಒಳಪಡಿಸಬೇಕೆಂದೂ, ಶಾಸಕರ ಮೇಲಿನ ಅಮಾನತು ಕ್ರಮವನ್ನು ಹಿಂತೆಗೆದುಕೊಳ್ಳಲೂ ಸಿ.ಪಿ.ಐ.(ಎಂ) ಒತ್ತಾಯಿಸುತ್ತದೆ. ಡಿ.ಐ.ಜಿ. ಎನ್.ಬಿ.ಭಟ್ ಮತ್ತು ಶಿವಮೊಗ್ಗ ಎಸ್. ಪಿ. ಮೇಲಿನ ಕ್ರಮಗಳನ್ನೂ ಹಿಂತೆಗೆದುಕೊಳ್ಳಲು ಸಿ. ಪಿ. ಐ. (ಎಂ) ಒತ್ತಾಯಿಸುತ್ತದೆ.

ರಾಜ್ಯದಾದ್ಯಂತ ಪ್ರತಿಭಟನೆ ಬೆಳೆದುಬರುತ್ತಿದ್ದರೂ, ಜನಾಭಿಪ್ರಾಯವನ್ನು ಗಣನೆಗೆ ತಾರದೆ ಇಬ್ರಾಹಿಂ ಅವರನ್ನು ಮಂತ್ರಿ ಸ್ಥಾನದಿಂದ ವಜಾ ಮಾಡುವುದಿಲ್ಲ ಎಂಬುದಾಗಿ ಗುಂಡೂರಾವ್ ಹೇಳಿರುವ ವರದಿಯಾಗಿದೆ. ಇದು ರಾಜ್ಯದ ಜನತೆಗೇ ಒಂದು ಸವಾಲಾಗಿದೆ. ಆದುದರಿಂದ ಇಬ್ರಾಹಿಂ ಮಾತ್ರವೇ ಅಲ್ಲ ಗುಂಡೂರಾವ್ ಅವರನ್ನೇ ಅಧಿಕಾರದಿಂದ ಕೆಳಗಿಳಿಸುವುದಕ್ಕಾಗಿ ಹೋರಾಡಲು ರಾಜ್ಯದ ಜನತೆಗೆ ಸಿ. ಪಿ. ಐ. (ಎಂ) ಕರೆ ನೀಡುತ್ತದೆ.

ಸರ್ವಾಧಿಕಾರಿಗಳ ಕೈಯಲ್ಲಿ ಪ್ರಜಾಪ್ರಭುತ್ವ ಹರಾಜಾಗಲಿದೆ

ಸಂಜಯ್‌ಗಾಂಧಿ ಭಜನೆ ದೇಶದ ಉದ್ದಗಲಕ್ಕೂ ಇಂದು ನಡೆಯುತ್ತಿದೆ. ಸಂಜಯ್‌ಗಾಂಧಿಯನ್ನು ಜಯಪ್ರಕಾಶ್‌ನಾರಾಯಣ್‌ರವರಿಗೆ ಹೋಲಿಸುವ ಮೂಲಕ ಇವರ ಸ್ಮರಣೆಗಾಗಿ ಅಂಚೆ ಚೀಟಿಯನ್ನು ಬಿಡುಗಡೆ ಮಾಡಲಾಗಿರುವುದನ್ನು ಸ್ಟೀಫನ್ ಸಮರ್ಥಿಸಿದ್ದಾರೆ. ಆದರೆ ನಿಜಕ್ಕೂ ಸಂಜಯ್ ಯೋಗ್ಯತೆ ಏನಾಗಿತ್ತು? ಭಾರತದ ಪ್ರಧಾನಿಯ ಮಗನಾಗಿದ್ದ ಎಂಬ ಹೆಸರಿನ ಪ್ರಭಾವದ ಹೊರತಾದ ಬೇರಾವ ಯೋಗ್ಯತೆಯೂ ಇವರಲಿದ್ದದ್ದು ನನಗೆ ಕಂಡುಬಂದಿಲ್ಲ. ಸರ್ವಾಧಿಕಾರಿ ತಾಯಿಯ ಸರ್ವಾಧಿಕಾರಿ ಮಗನಾದ ಸಂಜಯ್‌ಗಾಂಧಿ ಅದೆಂತಹ "ದೇಶಸೇವೆ" ಮಾಡಿದ್ದಾರೋ ತಿಳಿಯದಾಗಿದೆ. ಈ ವ್ಯಕ್ತಿ ದೇಶದ ಯುವಜನತೆಯ ಸ್ಫೂರ್ತಿಯ ಸಂಕೇತವಾಗಿದ್ದರೆಂಬುದರಲ್ಲಿ ಯಾವ ಅರ್ಥವೂ ಇಲ್ಲ.

ಸಂಜಯ್‌ಗಾಂಧಿ ಹೆಸರಿನಲ್ಲಿ ಇಂದು ನಡೆಯುತ್ತಿರುವ ಅಬ್ಬರದ ಪ್ರಚಾರ, ಸಭೆ ಸಮಾರಂಭ, ಹಣವ್ಯಯ ಎಲ್ಲವೂ ವ್ಯರ್ಥವಾದದ್ದು. ಇದರ ಹಿಂದೆ ಕಪ್ಪುಹಣದ ಕದೀಮರ, ದಗಾಕೋರರ, ಕಳ್ಳವ್ಯಾಪಾರಿಗಳ ಕೈವಾಡವಿದೆ. ಮತ್ತೊಂದು ವಿಚಾರ, ಸಂಜಯ್ ಗಾಂಧಿ ಬಗ್ಗೆ ಇಷ್ಟೆಲ್ಲಾ ಪ್ರಚಾರ ಅಬ್ಬರತಾಳ ಮಾಡುತ್ತಿರುವ ಜನ ಸಂಜಯ್‌ಗಾಂಧಿಯ ಬೇಜವಾಬ್ದಾರಿತನದ ವಿಮಾನ ನಡೆಸುವಿಕೆಯ ಫಲವಾಗಿ ಅವರೊಂದಿಗೆ ಸಾಯಬೇಕಾಗಿ ಬಂದ ಅಸಹಾಯಕ ಪೈಲೆಟ್ ಸೆಕ್ಸೆನಾರವರ ಬಗ್ಗೆ, ಅವರ ಪತ್ನಿಯ ಬಗ್ಗೆ ಎಷ್ಟು ಆಲೋಚಿಸುತ್ತಿದ್ದಾರೆ? ಇನ್ನಾದರೂ ಸಂಜಯ್ ಹೆಸರಿನಲ್ಲಿ ನಡೆಯುತ್ತಿರುವ ಅಬ್ಬರತಾಳ, ಹಣದ ದುರ್ವ್ಯಯ ನಿಲ್ಲಲಿ.

ಈ ಸಂದರ್ಭದಲ್ಲಿ ಕೆಲವು ವಿಚಾರಗಳನ್ನು ಹೇಳಬೇಕಾಗುತ್ತದೆ. ಈಗ ರಾಜೀವ್‌ಗಾಂಧಿಯನ್ನು ರಾಜಕೀಯಕ್ಕೆ ಒತ್ತಾಯವಾಗಿ ಎಳೆತಂದು ಕಾಂಗ್ರೈಗಾಧಿಗೆ ಏರಿಸುವ ಪ್ರಯತ್ನ ಆರಂಭವಾಗಿದೆ. ರಾಜೀವ್ ದೇಶದ ಯುವಜನರ ಏಕೈಕ ಮುಂದಾಳು, ರಾಷ್ಟ್ರದ ಮುಂದಿನ ಪ್ರಧಾನಿ ಎಂದೆಲ್ಲಾ ಹೊಗಳುಭಟ್ಟಂಗಿಗಳು ದೇಶದ ಉದ್ದಗಲಕ್ಕೂ ತುತ್ತೂರಿ ಊದಲಾರಂಭಿಸಿದ್ದಾರೆ. ಏಕಮನೆಯ ಸರ್ವಾಧಿಕಾರವನ್ನು ಕಳೆದ 34 ವರ್ಷಗಳಿಂದ ದೇಶ ಅನುಭವಿಸಿದೆ. ಇನ್ನು ಮುಂದೆಯೂ ಈ ದೇಶವನ್ನು ಅದೇ ಮನೆತನಕ್ಕೆ ಗುತ್ತಿಗೆಯನ್ನಾಗಿ ನೀಡುವ ಕುತಂತ್ರ, ದು (ದೂ)ರಾಲೋಚನೆ "ರಾಜೀವ್ ಗಾಂಧೀಕೀ ಜೈ" ಎನ್ನುವ ಜನರಲ್ಲಿದೆ. ಆದ್ದರಿಂದ ಈ ಕುತಂತ್ರದ ಹಿಂದಿರುವ ದುರಂತವನ್ನು ಜನತೆಗೆ ಅರಿವು ಮಾಡಿಕೊಡುವ ದೊಡ್ಡ ಜವಾಬ್ದಾರಿ ಎಡ, ಪ್ರಜಾಪ್ರಭುತ್ವವಾದಿ ಶಕ್ತಿ, ವ್ಯಕ್ತಿಗಳ ಮೇಲಿದೆ. ಏಕವ್ಯಕ್ತಿಯ, ಏಕಮನೆತನದ ನಗ್ನ ಸರ್ವಾಧಿಕಾರದ ಬೂಟುಕಾಲಿನಡಿ ಸಿಲುಕಿ ಪ್ರಜಾಪ್ರಭುತ್ವ ಮೌಲ್ಯಗಳು ಇತಿಶ್ರೀ ಹೇಳುತ್ತಿದ್ದು, ಜನತೆಯ ನ್ಯಾಯಬದ್ಧವಾದ ಬೇಡಿಕೆಗಳ ಹೋರಾಟಗಳಿಗೆ ಪೋಲೀಸರ ಲಾಠಿ ಗುಂಡುಗಳು ಉತ್ತರ ನೀಡುತ್ತಿವೆ. ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಸಮಾಜವಾದದ 'ಅ ಆ ಇ ಈ' ಗೊತ್ತಿರದ, ಗೂಂಡಾಗಿರಿ, ಮೂರ್ಖತನ ಇವಿಷ್ಟನ್ನೇ ಗುಣಗಳನ್ನಾಗಿಸಿಕೊಂಡಿರುವ ಅಯೋಗ್ಯ ಜನಗಳು ಅಧಿಕಾರರೂಢರಾಗುತ್ತಿದ್ದಾರೆ. ಅಧ್ಯಕ್ಷೀಯ ಮಾಧರಿ ಸರಕಾರವನ್ನು ರಚಿಸುವ ಕನಸು ಕಾಣುತ್ತಿದ್ದಾರೆ. ದೇಶದ ಭವಿಷ್ಯ, ಜನರ ಬದುಕು, ಪ್ರಜಾಪ್ರಭುತ್ವ ಮೌಲ್ಯಗಳು ಸರ್ವಾಧಿಕಾರಿಗಳ ಕೈಯಲ್ಲಿ ಹರಾಜಾಗುವ ಮೊದಲು ಪ್ರಜ್ಞಾವಂತ ಜನ ಜನಜಾಗೃತಿಗಾಗಿ ಕೆಲಸಮಾಡಬೇಕು. ದೇಶದ ಎಡ, ಪ್ರಜಾಪ್ರಭುತ್ವವಾದಿ ಸಂಘಟನೆಗಳ ಬಲವರ್ಧನೆ ಮಾಡಬೇಕು.

—ಕುಮಾರ್, ಕುಂದಾಪುರ

ಹೋಟೆಲ್ ಕಾರ್ಮಿಕರ ಹೋರಾಟ

ಬೆಂಗಳೂರಿನಲ್ಲಿರುವ ಹೋಟೆಲ್ ಮೆಜೆಸ್ಟಿಕ್‌ನ ಕಾರ್ಮಿಕರು ಕಳೆದ 35 ದಿನಗಳಿಂದ ಮುಷ್ಕರದಲ್ಲಿದ್ದಾರೆ. ಕಾರಣ ಗೊತ್ತೆ? ಎಂಟು ಘಂಟೆ ಕೆಲಸದ ಅವಧಿಯ ನಿಗಧಿಗಾಗಿ.

ಬೆಂಗಳೂರಿನ ಕೇಂದ್ರ ಸ್ಥಳದಲ್ಲಿರುವ ಈ ಹೋಟೆಲ್‌ನಲ್ಲಿ 45 ಜನ ಕಾರ್ಮಿಕರು ಕೆಲಸಮಾಡುತ್ತಿದ್ದರು. ಹೋಟೆಲ್ ಮಾಲೀಕ ಹಗಲೂ ರಾತ್ರಿ ಹೋಟೆಲ್ ತೆರೆದಿಟ್ಟು ಅಪಾರ ಲಾಭಗಿಟ್ಟಿಸಿದ್ದರೂ ಎಂಟು ಘಂಟೆಯ ಕೆಲಸದ ಅವಧಿಯ ಕನಿಷ್ಠ ಸೌಲಭ್ಯವನ್ನು ಕೊಡಲು ಸಿದ್ಧನಿಲ್ಲ.

ಸಹಬಾಂಧವರ ಬೆಂಬಲ, ಸಹಕಾರದೊಂದಿಗೆ ಈ ಕಾರ್ಮಿಕರ ಹೋರಾಟ ಮುಂದುವರೆದಿದೆ.

[ಹಿಂದಿನ ಸಂಚಿಕೆಯಿಂದ]

ಬುಡವಿಲ್ಲದ ಹೇಳಿಕೆ

ವಾಸ್ತವಿಕವಾಗಿ "ಬುಡವಿಲ್ಲದ ಹೇಳಿಕೆ"ಯೆಂದರೆ ಒಂದೊಮ್ಮೆ ಸಂಯುಕ್ತವಾಗಿದ್ದ ಸಿ.ಪಿ.ಐ.ನಲ್ಲಿ ತಾವು ಹಾಗೂ ತಮ್ಮ ಪ್ರವೃತ್ತಿಯ ಬಹುಸಂಖ್ಯಾತರು "ಸ್ಥಿರ ಅಲ್ಪಸಂಖ್ಯಾತ ಪಂಥವಾದೀ ವಿರುದ್ಧ ಸರಿಯಾದ ಮಾರ್ಕ್ಸ್‌ವಾದೀ-ಲೆನಿನ್‌ವಾದೀ ದಾರಿ ಹಿಡಿದಿದ್ದೆವೆನ್ನುವ ರಾಜೇಶ್ವರರಾಯರ ಹೇಳಿಕೆಯೇ ಸಿ. ಪಿ. ಐ.(ಎಂ) ಇದುವರೆಗೆ ಯಾವುದೇ ತಪ್ಪು ಮಾಡಿದ್ದರೂ, ಇನ್ನು ಮುಂದೇನೂ ಮಾಡಬಹುದಾದರೂ ಒಂದು ಕಾರ್ಮಿಕ ಪಕ್ಷವಾಗಿ ಕ್ರಾಂತಿಕಾರೀ ವಿರೋಧ ಪಕ್ಷದ ಪಾತ್ರವನ್ನು ಬಿಟ್ಟು ವಿಶ್ವಾಸಘಾತ ಮಾಡಿ ಬೂರ್ಜ್ವಾ-ಭೂಮಾಲಿಕ ಪಕ್ಷದ ಬಾಲಂಗೋಚಿಯಾಗುವ ತಪ್ಪನ್ನು ಇದುವರೆಗೆ ಮಾಡಿಲ್ಲ. ಇನ್ನು ಮುಂದೇನೂ ಮಾಡುವುದಿಲ್ಲ. ಸಿ.ಪಿ.ಐ. 1967-69ರಲ್ಲಿ ಮಾಡಿದಂತೆ ಸ್ವತಂತ್ರ ಪಕ್ಷ ಹಾಗೂ ಜನಸಂಘಗಳಂತಹ ಪಕ್ಷಗಳೊಂದಿಗೆ ನೀತಿಬಾಹಿರ ಕೂಟ ಬೆಳೆಸಿ ಕಾಂಗ್ರೆಸ್ಸೇತರ ರಾಜ್ಯ ಸರಕಾರಗಳನ್ನು ರಚಿಸುವ

ಆ ಬಗ್ಗೆ ಹೇಳುವುದಾದರೆ ಯಾವುದೇ ಪಕ್ಷ ಅಥವಾ ಪಕ್ಷಗಳು, ವಿಜಯೀ ಸಮಾಜವಾದೀ ಕ್ರಾಂತಿಗಳ ನೇತೃತ್ವ ವಹಿಸಿದ, ದೊಡ್ಡ ಸಾಧನೆಗಳ ಕೀರ್ತಿ ಪಡೆದ ಪಕ್ಷಗಳೂ ಸೇರಿ ಯಾವುದೂ ಎಂದೂ ತಪ್ಪೇ ಮಾಡದಂತಹ ಪಕ್ಷಗಳೇ ಅಲ್ಲ ಎಂದು ಜಾಗತಿಕ ಕಮ್ಯುನಿಸ್ಟ್ ಚಳುವಳಿಯ ಚರಿತ್ರೆಯಿಂದ ಸಿ. ಪಿ. ಐ. (ಎಂ) ತಿಳಿದುಕೊಂಡಿದೆ. ಹಲವು ಆಳುವ ಕಮ್ಯುನಿಸ್ಟ್ ಪಕ್ಷಗಳಲ್ಲಿ ಎಡ ಅಥವಾ ಬಲದ ಕಡೆಗೆ ಮಾರ್ಗಚ್ಯುತಿಯನ್ನು ಹಾಗೂ ಅದನ್ನು ಸರಿಪಡಿಸಿದ ಪ್ರಕ್ರಿಯೆಯನ್ನು ನಾವು ಕಂಡಿಲ್ಲವೇ ? ತಾನು "ತಪ್ಪೇ ಮಾಡುವುದಿಲ್ಲ" ಎಂದು ಯೋಚಿಸುವ ತಪ್ಪನ್ನು ಸಿ. ಪಿ. ಐ. (ಎಂ) ಮಾಡಿಲ್ಲ. ಅಲ್ಲದೆ ಸಿ. ಪಿ. ಐ. ಕೆಲವು ಪಕ್ಷಗಳ ಬಗ್ಗೆ ಮಾಡುವಂತೆ ಬೇರೆ ಯಾವುದೇ ಕಮ್ಯುನಿಸ್ಟ್ ಪಕ್ಷ "ತಪ್ಪೇ ಮಾಡುವುದಿಲ್ಲ" ಎಂದೂ ಅದು ತಿಳಿಯುವುದಿಲ್ಲ;ಸಿ.ಪಿ.ಐ.(ಎಂ) ಅನ್ನು ಉದ್ದೇಶಿಸಿ ಹೇಳಿದ "ಯಾರೂ ತಪ್ಪು ಮಾಡುವುದೇ ಇಲ್ಲ ಎಂಬ ನಿಲುವನ್ನು ತಗೊಳ್ಳದಿರಲಿ" ಎಂಬ ರಾಜೇಶ್ವರರಾಯರ ನೀತಿ ಉಪದೇಶಗಳನ್ನು ಸಿ. ಪಿ. ಐ. ಕೂಡ ಸೇರಿದಂತೆ ಇತರ ಕೆಲವು ಪಕ್ಷಗಳಿಗೆ ನೀಡಬೇಕು.

ಹಳಿತಪ್ಪಿಸಿಲ್ಲ. ನಮ್ಮ ಎಲ್ಲಾ ಟೀಕೆ ಹಾಗೂ ಭಿನ್ನಾಭಿಪ್ರಾಯಗಳು ಸೋವಿಯೆಟ್ ಒಕ್ಕೂಟ ಹಾಗೂ ಚೀನಾ ಜನತಾ ಗಣತಂತ್ರದ ಸಮಾಜವಾದವನ್ನು ಹಾಗೂ ಇತರ ಸಮಾಜವಾದೀ ಪ್ರಭುತ್ವಗಳನ್ನು ರಕ್ಷಿಸುವ ಅತ್ಯುಚ್ಚ ಉದ್ದೇಶಕ್ಕೆ ಅಧೀನವಾಗಿವೆ. 1956ರ ಹಂಗೇರಿ ಬಿಕ್ಕಟ್ಟು, 1968ರ ಜೆಕೋಸ್ಲೋವಾಕಿಯಾ ಬಿಕ್ಕಟ್ಟು ಹಾಗೂ ಈ ರೀತಿಯ ಇತರ ಬಿಕ್ಕಟ್ಟುಗಳ ಪರೀಕ್ಷಾ ಸಮಯವನ್ನು ಎದುರಿಸಬೇಕಾಗಿ ಬಂದಾಗ ಸಿ. ಪಿ. ಐ. (ಎಂ)ನಾಯಕರು ಹಲವು ಸಿ. ಪಿ. ಐ. ನಾಯಕರಂತೆ ತಡವರಿಸಲಿಲ್ಲ; ಸಮಾಜವಾದದ ರಕ್ಷಣೆ ಹಾಗೂ ಪ್ರತಿಕ್ರಾಂತಿಯನ್ನು ವಿರೋಧಿಸಲು ಹಿಂದುಮುಂದು ನೋಡಲಿಲ್ಲ. ಡುಬ್ಚೆಕ್ ನಂತಹ ವ್ಯಕ್ತಿಗಳು ಹಾಗೂ ಆತನ "ಪ್ರಜಾಸತ್ತಾತ್ಮಕ" ಸುಧಾರಣೆಗಳ ಬಗ್ಗೆ ಸ್ತುತಿಗೀತೆ ಹಾಡಲಿಲ್ಲ. ಭಾರತ ಮತ್ತು ಚೀನಾ ನಡುವಿನ ಉತ್ತಮ ಸಂಬಂಧಗಳು ಎರಡು ದೇಶಗಳ ನಡುವೆ ಗಡಿಯುದ್ಧ ನಡೆಯುವ ತನಕ ಹದಗೆಟ್ಟಾಗ ಸ್ಥಿಮಿತ ಕಳೆಕೊಂಡು ಚಿತ್ತೋದ್ರೇಕದ ಸಂಕುಚಿತವಾದಿಗಳಾಗಲಿಲ್ಲ. ನಮ್ಮ ಸೈದ್ಧಾಂತಿಕ ಹಾಗೂ ರಾಜಕೀಯ ವಿಮರ್ಶೆಗಳು ದಾಖಲೆಗಳಲ್ಲಿವೆ. ರಾಷ್ಟ್ರೀಯ

ವಳಿಯಲ್ಲಿ ಬಲಪಂಥೀಯ ಪರಿಷ್ಕರಣವಾದ ಮುಖ್ಯ ಲಕ್ಷಣವಾಯಿತು ಹಾಗೂ 1957ರ ಮತ್ತು 1960ರ ಎರಡೂ ಜಾಗತಿಕ ಕಮ್ಯುನಿಸ್ಟ್ ದಸ್ತಾವೇಜುಗಳಲ್ಲಿ ಅದನ್ನು ಸ್ಪಷ್ಟವಾಗಿ ಸೂಚಿಸಲಾಗಿದೆ ಎಂಬುದು ಚಾರಿತ್ರಿಕವಾಗಿ ಸಿದ್ಧವಾದ ಸತ್ಯಸಂಗತಿಯೆಂದು ರಾಜೇಶ್ವರರಾಯರಿಗೆ ನೆನಪಿಸಿಕೊಡುವುದು ನಮ್ಮ ಕರ್ತವ್ಯವಾಗಿ ತಿಳಿಯುತ್ತೇವೆ. "ಅಂತಾರಾಷ್ಟ್ರೀಯ ಘೋಷಣೆ ಹಾಗೂ ಹೇಳಿಕೆ"ಯಲ್ಲಿ ಅದನ್ನು ಹೇಗೆ ಹೇಳಲಾಗಿದೆ? 1957ರ 'ಮಾಸ್ಕೋ ಘೋಷಣೆ' ಹೀಗೆನ್ನುತ್ತದೆ. "ತತ್ವಾಂಧತೆಯನ್ನು ಖಂಡಿಸುವಾಗ ಕಮ್ಯುನಿಸ್ಟ್ ಪಕ್ಷಗಳು ಸದ್ಯದ ಪ್ರಮುಖ ಅಪಾಯ ಪರಿಷ್ಕರಣವಾದ ಎಂದು ನಂಬುತ್ತದೆ. ಅಂದರೆ ಕಾರ್ಮಿಕವರ್ಗದ ಕ್ರಾಂತಿಕಾರೀ ಚೈತನ್ಯವನ್ನು ಅಸ್ತವ್ಯಸ್ತಗೊಳಿಸಿ ಬಂಡವಾಳಶಾಹಿಯ ಕಾಪು ಹಾಗೂ ಪುನಃಸ್ಥಾಪನೆಯಾಗಬೇಕೆಂದು ಕೇಳುವ ಬೂರ್ಜ್ವಾ ಸಿದ್ಧಾಂತದ ರೂಪವಾದ ಬಲಪಂಥೀಯ ಸಮಯಸಾಧಕತನ". 1960ರ 'ಮಾಸ್ಕೋ ಹೇಳಿಕೆ'ಯಲ್ಲಿ ಇನ್ನೊಮ್ಮೆ ಇದನ್ನು ಹೀಗೆಂದು ಪುನರುಚ್ಚರಿಸಲಾಯಿತು. "ಕಮ್ಯುನಿಸ್ಟ್ ಹಾಗೂ ಕಾರ್ಮಿಕ ವರ್ಗದ ಚಳವಳಿ ಮತ್ತಷ್ಟು ಬೆಳೆಯಬೇಕಾದರೆ 1956ರ

ಗಳಿಗೆ ಮಾತ್ರ ಎಂದು ಬಹುಶಃ ರಾಜೇಶ್ವರರಾಯರು ತಿಳಿದಿದ್ದಾರೆ. ನಾವು ಈ ಎಚ್ಚರಿಕೆಗಳನ್ನು ಆ ರೀತಿಯಲ್ಲಿ ತಿಳಿದಿಲ್ಲ. ಈ ವಿಷಯದಲ್ಲಿ ನಾವು ರಾಜೇಶ್ವರರಾಯರೊಂದಿಗೆ ಭಿನ್ನಾಭಿಪ್ರಾಯ ಹೊಂದಬಯಸುತ್ತೇವೆ. ಕಾರ್ಮಿಕ ಸರ್ವಾಧಿಕಾರದ ಪರಿಕಲ್ಪನೆಯನ್ನು ಪರಿಷ್ಕರಿಸಿದ್ದು, ಸಮಾಜವಾದ ಮತ್ತು ಸಾಮ್ಯವಾದದಲ್ಲಿ. ಬಹುಪಕ್ಷ ಪದ ತಿಗೆ ಗ್ಯಾರಂಟಿ ನೀಡಿದ್ದು, ಲೆನಿನ್‌ವಾದ ಒಂದು "ರಶಿಯನ್ ಸಂಗತಿ" ಎಂಬ ಅಭಿಪ್ರಾಯ, ಮಾರ್ಕ್ಸ್‌ವಾದ-ಲೆನಿನ್‌ವಾದ ಎಂಬ ಶಬ್ದದ ಬದಲು ವೈಜ್ಞಾನಿಕ ಸಮಾಜವಾದವೆಂಬ ಹೆಸರನ್ನು ಉಪಯೋಗಿಸಿದ್ದು ಮತ್ತು ರಕ್ಷಣಾತ್ಮಕ ವಾರ್ಸಾ ಒಪ್ಪಂದವನ್ನು ಆಕ್ರಾಮಕ ಸಾಮ್ರಾಜ್ಯಶಾಹೀ ನಾಟೋದೊಂದಿಗೆ ಸರಿಹೋಲಿಸುವುದು ಇತ್ಯಾದಿ, ನಮ್ಮ ಪ್ರಕಾರ, ಬಲಪಂಥೀಯ ಪರಿಷ್ಕರಣವಾದಿ ಯೋಚನೆಯ ವಿಧದಲ್ಲಿ ಪರಿಗಣಿಸಲ್ಪಡುತ್ತವೆ. ಇದು ಕೆಲವು ಪ್ರತ್ಯೇಕಿತ ಪಕ್ಷಗಳಿಗೆ ಮಾತ್ರ ಮೀಸಲಾಗಿಲ್ಲ ಹಾಗೂ ಇದು ಸಮಾಜವಾದೀ ವ್ಯವಸ್ಥೆಯನ್ನು ನಿರ್ನಾಮಗೊಳಿಸುವ ಮತ್ತು ಸೋವಿಯೆತ್ ಒಕ್ಕೂಟದಲ್ಲಿನ ಸಮಾಜವಾದವನ್ನು ಸಾಮಾಜಿಕ-

ಸಿ.ಪಿ.ಐ.(ಎಂ) ವಿರುದ್ಧ ರಾಜೇಶ್ವರರಾಯರ ಫಿರಂಗಿ ಗುಂಡುಗಳನ್ನು ಕುರಿತು

ಎಂ. ಬಸವಪುನ್ನಯ್ಯ

ಮಟ್ಟಕ್ಕೂ ಅದು ಇಳಿಯಲಿಲ್ಲ. ಈ ಮಾರ್ಕ್ಸ್‌ವಾದಿ-ಲೆನಿನ್‌ವಾದೀ ಮಾರ್ಗ ಹಿಡಿದುದರಿಂದಲೇ ಸಿ. ಪಿ. ಐ.(ಎಂ) ಜಗತ್ತಿನ ಹಲವು ದೊಡ್ಡ ಹಾಗೂ ಚಿಕ್ಕ ಕಮ್ಯುನಿಸ್ಟ್ ಪಕ್ಷಗಳ ಹೀಯಾಳಿಕೆ ಹಾಗೂ ಖಂಡನೆಗೊಳಗಾದರೂ ಈಗ ತಾನು ಪಡೆದಿರುವ ಜನಸಾಮಾನ್ಯರ ಬೆಂಬಲದ ಶಕ್ತಿಯನ್ನು ಪಡೆಯಲು ಸಾಧ್ಯವಾಯಿತು. ಇದಿಷ್ಟನ್ನೇ ಸಿ. ಪಿ. ಐ. (ಎಂ) ನಾಯಕತ್ವ ತನ್ನ ಬಗ್ಗೆ ಹೇಳಿಕೊಳ್ಳುತ್ತದೆ. ಹಾಗೆಂದು ನ್ಯಾಯಯುತವಾಗಿಯೇ ಹಾಗೂ ಹೆಮ್ಮೆಯಿಂದ ಹೇಳಿಕೊಳ್ಳುತ್ತದೆ.

ರಾಜೇಶ್ವರರಾವ್ ಸಿ. ಪಿ. ಐ. (ಎಂ)ಗೆ "ಅಂತರಾಷ್ಟ್ರೀಯ ಪರಿಸ್ಥಿತಿಯ ತಮ್ಮ ತಿಳುವಳಿಕೆಯ ಬಗ್ಗೆ ಪುನರ್ಯೋಚಿಸಬೇಕು" ಎಂದು ಹೇಳಿ "ಯಾರೂ ತಾವು ತಪ್ಪೇಮಾಡುವುದಿಲ್ಲ ಎಂಬ ನಿಲುವು ತಿಳಿಯದಿರಲಿ" ಎಂದು ಎಚ್ಚರಿಸುತ್ತಾರೆ. ಸಿ. ಪಿ. ಐ.ನ ಮಹಾ ಕಾರ್ಯದರ್ಶಿಗೆ ಇಷ್ಟು ನಾವು ಭರವಸೆ ಕೊಡಬಯಸುತ್ತೇವೆ– ಸಿ. ಪಿ. ಐ. (ಎಂ) ನಾಯಕತ್ವ ತನ್ನ ಧೋರಣೆಗಳನ್ನು ರೂಪಿಸುವ ಮತ್ತು ಕಾರ್ಯಗತಗೊಳಿಸುವ ಬಗ್ಗೆ ಯೋಚಿಸಲು ಸದಾ ತಯಾರಿದೆ. ಮತ್ತು "ತಪ್ಪೇ ಮಾಡುವುದಿಲ್ಲ" ಎಂಬ ಸೋಗನ್ನು ಎಂದೂ ಹಾಕುವುದಿಲ್ಲ.

ಅಂತಾರಾಷ್ಟ್ರೀಯ ಚಳುವಳಿ

ರಾಜೇಶ್ವರರಾಯರು ತಮ್ಮ ಪ್ರಬಂಧದ ಬಹು ಭಾಗದಲ್ಲಿ ಸೋವಿಯೆಟ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷ (CPSU) ಹಾಗೂ ಚೀನಾ ಕಮ್ಯುನಿಸ್ಟ್ ಪಕ್ಷ (CPC)ಗಳ ಬಗ್ಗೆ ಸಿ. ಪಿ. ಐ. (ಎಂ) ಈ ಹಿಂದೆ ವಿವಿಧ ಅವಧಿಗಳಲ್ಲಿ ಹಾಗೂ ಘಟ್ಟಗಳಲ್ಲಿ ತಳೆದ ನಿಲುವಿನ ಬಗ್ಗೆ ಹೇಳುತ್ತಾರೆ. ತಿಲಮಾತ್ರವಾದರೂ ಸಾಮಾನ್ಯ ಪರಿಜ್ಞಾನವಿರುವ ಯಾವ ಓದುಗನೂ ರಾಜೇಶ್ವರರಾಯರು ಸಿ. ಪಿ. ಐ. (ಎಂ)ನ್ನು ಮೂಲಭೂತವಾಗಿ ಸೋವಿಯೆಟ್ ವಿರೋಧೀ ಹಾಗೂ CPSU ವಿರೋಧಿಯೆಂದೂ, CPC ಪರ ಹಾಗೂ ಚೀನಾ ಜನತಾ ಗಣತಂತ್ರ (PRC) ಪರ ಎಂದೂ ಚಿತ್ರಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಅರ್ಥಮಾಡಿಕೊಳ್ಳಬಲ್ಲ. ಇಂತಹ ಪ್ರಯತ್ನಗಳು ನ್ಯಾಯಪೂರ್ಣವಲ್ಲ; ಆದರಿಂದ ಯಾವ ಫಲವೂ ಇಲ್ಲ. CPSU ಅಥವಾ CPC ಯೊಡನೆ ನಾವು ಯಾವುದೇ ರಾಜಕೀಯ, ಸೈದ್ಧಾಂತಿಕ ಭಿನ್ನಾಭಿಪ್ರಾಯ, ಟೀಕೆ ಹಾಗೂ ಭಿನ್ನತೆ ಹೊಂದಿದ್ದರೂ ಅವು ಎಂದೂ ನಮ್ಮನ್ನು ಸೋವಿಯೆಟ್ ವಿರೋಧ ಅಥವಾ ಚೀನಾ ವಿರೋಧದೆಡೆಗೆ

ಹಾಗೂ ಅಂತಾರಾಷ್ಟ್ರೀಯ ಬೆಳವಣಿಗೆಗಳ ಸದ್ಯದ ಹಂತದಲ್ಲಿ ಆ ಬಗ್ಗೆ ರಾಜೇಶ್ವರರಾಯರು ಚುಚ್ಚಿ ಚರ್ಚೆಗೆ ಎಳೆಯಬಯಸಿದರೂ, ನಾವು ಈ ರೀತಿ ಚರ್ಚೆಗೆ ಬೀಳಬಯಸುವುದಿಲ್ಲ.

ಸಿ.ಪಿ.ಐ.(ಎಂ)ನ ಸೈದ್ಧಾಂತಿಕ ನಿರ್ಣಯದಿಂದ ಅವರು ಈ ಒಂದು ಪರಿಚ್ಛೇದವನ್ನು ಉದ್ಧರಿಸಿದ್ದಾರೆ: ಪರಿಷ್ಕರಣವಾದದ ಎಲ್ಲಾ ಅವತಾರಗಳೊಂದಿಗೆ ಅದರ ಪಿಡುಗಿನ ವಿರುದ್ಧ ನೀತಿಬದ್ಧ ಹಾಗೂ ಸಂಕಲ್ಪಪೂರ್ವಕ ಹೋರಾಟ ನಡೆಸದಿದ್ದರೆ ಜಾಗತಿಕ ಕಮ್ಯುನಿಸ್ಟ್ ಚಳುವಳಿಯ ಕ್ರೋಢೀಕರಣ ಮತ್ತು ಅದನ್ನು ತೀವ್ರವಾಗಿ ಮುಂದುವರಿಸುವುದರ ಬಗ್ಗೆ ಊಹಿಸುವುದೂ ಸಾಧ್ಯವಿಲ್ಲ" ಈ ಉದ್ಧರಣೆಯನ್ನು ಅವರು "ಪರಿಷ್ಕರಣವಾದದ ಪಿಡುಗಿನ ವಿರುದ್ಧ ಹೋರಾಟ" ಸೋವಿಯೆತ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷವನ್ನು ಒಡೆಯುವ ಉದ್ದೇಶದಿಂದ ಕಂಡುಹಿಡಿದ ಸಿ.ಪಿ.ಐ.(ಎಂ)ನ ಶೋಧವೇನೋ ಎಂಬಂತೆ ಕೊಟ್ಟಿದ್ದಾರೆ. ಆ ಅವಧಿಯಲ್ಲಿ ಅಂತಾರಾಷ್ಟ್ರೀಯ ಕಮ್ಯುನಿಸ್ಟ್ ಚಳ

ಮಾಸ್ಕೋ ಘೋಷಣೆಯಲ್ಲಿ ಹೇಳಿದಂತೆ ಎರಡು ರಂಗಗಳಲ್ಲಿ ಸತತ ಹಾಗೂ ಸಂಕಲ್ಪಪೂರ್ವಕ ಹೋರಾಟ ನಡೆಯಬೇಕು. ಇನ್ನೂ ಮುಖ್ಯ ಅಪಾಯವಾಗೇ ಉಳಿದಿರುವ ಪರಿಷ್ಕರಣವಾದದ ವಿರುದ್ಧ ಹಾಗೂ ತತ್ವಾಂಧತೆ ಮತ್ತು ಪಂಥವಾದದ ವಿರುದ್ಧ" ಅಲ್ಲದೆ ಅದು ಹೀಗೂ ಹೇಳಿವೆ "ತತ್ವಾಂಧತೆ ಮತ್ತು ಪಂಥವಾದದ ವಿರುದ್ಧವೂ ಅವಿರತ ಹೋರಾಟ ನಡೆಸದಿದ್ದರೆ ಪಕ್ಷಗಳ ಬೆಳವಣಿಗೆಯ ಕೆಲವು ಹಂತಗಳಲ್ಲಿ ಅದು ಸೈದ್ಧಾಂತಿಕವಾಗಿ ಹಾಗೂ ಕಾರ್ಯತಃ ಮುಖ್ಯ ಅಪಾಯವಾಗಲು ಸಾಧ್ಯವಿದೆ." (ಒತ್ತು ಸೇರಿಸಿದ್ದು)

ಬಲಪಂಥೀಯ ಪರಿಷ್ಕರಣವಾದ

1957ರ ಹಾಗೂ 1960ರ ಎರಡೂ ದಸ್ತಾವೇಜುಗಳಲ್ಲಿ ಬಲಪಂಥೀಯ ಪರಿಷ್ಕರಣವಾದ ಜಾಗತಿಕ ಕಮ್ಯುನಿಸ್ಟ್ ಚಳವಳಿ ಎದುರಿಸುತ್ತಿರುವ ಮುಖ್ಯ ಅಪಾಯವೆಂದು ಬೆರಳು ಮಾಡಿ ತೋರಿಸಲಾಗಿದೆ. ಈ ರೋಗಗಳಿಂದ ದೊಡ್ಡ ಪಕ್ಷಗಳು ಮುಕ್ತವಾಗಿವೆ. ಈ ಅಪಾಯಗಳನ್ನು ತೋರಿಸಿಕೊಟ್ಟದ್ದು ಅಲ್ಬೇನಿಯಾ ಹಾಗೂ ಬೋಸೋಟಾದ ಕಮ್ಯುನಿಸ್ಟ್ ಪಕ್ಷ

ಸಾಮ್ರಾಜ್ಯಶಾಹಿಯೆಂದು ದೂಷಿಸುವ ಎಡ ಸಮಯ-ಸಾಧಕ ದಾರಿಯೊಂದಿಗೇ ಜಾಗತಿಕ ಚಳುವಳಿ ಎದುರಿಸುತ್ತಿರುವ ಪ್ರಮುಖ ಅಪಾಯವಾಗಿದೆ.

ಭವಿಷ್ಯ ಸಿ. ಪಿ. ಐ. (ಎಂ)ನ ಈ ಶಂಕೆಗಳನ್ನು ಸುಳ್ಳೆಂದು ಸಾಧಿಸಲಿ ಹಾಗೂ ಈ ವಿಷಯಗಳ ಬಗ್ಗೆ ತನ್ನ ದೃಷ್ಟಿಯನ್ನು ಪರಿಷ್ಕರಿಸಲು ಸಹಾಯಮಾಡಲಿ. ಆದರೆ ರಾಜೇಶ್ವರರಾಯರು ಈ ಬಲಪಂಥೀಯ ಪರಿಷ್ಕರಣವಾದದ ಪಿಡುಗಿನ ಬಗ್ಗೆ ಪರಿಜ್ಞಾನವಿಲ್ಲದವರಾಗಿದ್ದಾರೆ ಎಂಬುದು ನಮ್ಮ ಶಂಕೆ. ಅವರು ಸದಾ ಸಿ.ಪಿ.ಐ.(ಎಂ)ನ "ಎಡ-ಪಂಥವಾದೀ ಪ್ರವೃತ್ತಿ" ಬಗ್ಗೆ ಮಾತನಾಡುತ್ತಿರುತ್ತಾರೆ. ಸಿ.ಪಿ.ಐ. ಎದುರಿಸುತ್ತಿರುವ ಡಾಂಗೇವಾದ ಬಲಪಂಥೀಯ ಪರಿಷ್ಕರಣವಾದವನ್ನು ಪ್ರತಿನಿಧಿಸುತ್ತದೋ ಅಥವಾ ಎಡಪಂಥೀಯ ಪಂಥವಾದವನ್ನೋ?

ನಾವು ಈ ಖೇದಕರ ವಿವಾದಕ್ಕೆ ಇಳಿಯಬೇಕಾದುದಕ್ಕೆ ನಮಗೆ ವಿಷಾದವೆನಿಸುತ್ತದೆ ಮತ್ತು ಸಿ. ಪಿ. ಐ. ಹಾಗೂ ಅದರ ನಾಯಕರು ರಾಜೇಶ್ವರರಾಯರು ಈಗ ಚರ್ಚಿಸುತ್ತಿರುವ ತಮ್ಮ ಲೇಖನದಲ್ಲಿಯೇ ವ್ಯಕ್ತಪಡಿಸಿ

[9ನೇ ಪುಟ ನೋಡಿ]

ರಾಷ್ಟ್ರವ್ಯಾಪಿ ಚಳುವಳಿಗೆ ಎಸ್. ಎಫ್. ಐ. ಸಿದ್ಧತೆ

ಏಪ್ರಿಲ್ 19 ರಿಂದ 22ರವರೆಗೆ ಕಲ್ಕತ್ತೆಯಲ್ಲಿ ಜರುಗಿದ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ಕೇಂದ್ರಸಮಿತಿ ಸಭೆಯು ದೇಶದ ವಿದ್ಯಾರ್ಥಿ-ಯುವಜನತೆಯನ್ನು ಬಾಧಿಸುತ್ತಿರುವ ಉದ್ಯೋಗ ಮತ್ತು ಶಿಕ್ಷಣದ ಬೇಡಿಕೆಗಳಿಗಾಗಿ ರಾಷ್ಟ್ರವ್ಯಾಪಿ ಚಳುವಳಿ ನಡೆಸಬೇಕೆಂದು ತೀರ್ಮಾನಿಸಿದೆ. ಈ ಚಾರಿತ್ರಿಕ ತೀರ್ಮಾನವನ್ನು ಕರ್ನಾಟಕದಲ್ಲಿಯೂ ಪರಿಣಾಮಕಾರಿಯಾಗಿ ಜಾರಿಗೊಳಿಸುವ ಕಾರ್ಯಕ್ರಮ ರೂಪಿಸಲು ಎಸ್.ಎಫ್.ಐ. ರಾಜ್ಯಸಮಿತಿ ಸಭೆಯು ಜೂನ್ 17ರಂದು ಬೆಂಗಳೂರಿನಲ್ಲಿ ಸೇರಿತ್ತು.

ಅಗಲಿದ ಸಂಗಾತಿಗಳಿಗೆ ಶ್ರದ್ಧಾಂಜಲಿ :

ಎಸ್.ಎಫ್.ಐ. ಧ್ಯೇಯೋದ್ದೇಶಗಳಿಗಾಗಿ ತಮ್ಮ ಪ್ರಾಣಾರ್ಪಣೆ ಮಾಡಿದ ಸಂಗಾತಿಗಳಿಗೆ ಸಭೆಯು ಶ್ರದ್ಧಾಂಜಲಿ ಅರ್ಪಿಸಿತು. ಕಳೆದ ಜನವರಿ 21ರಂದು ಸಮಷ್ಟಿಪುರದ ಪೋಲೀಸರ ಗುಂಡಿಗೆ ಬಲಿಯಾದ ಕಾಂ. ಲಾಲ್‌ಬಹದ್ದೂರ್ ರಾಯ್, ಮಾರ್ಚ್ 31ರಂದು ಡಿ. ಎಂ. ಕೆ. ಗೂಂಡಾಗಳ ಧಾಳಿಗೆ ಬಲಿಯಾದ ತಮಿಳುನಾಡಿನ ಕಾಮ್ರೇಡ್ ಸೋಮಸುಂದರಂ ಮತ್ತು ಕಾಮ್ರೇಡ್ ಜಂಬುಲಿಂಗಂ ಹಾಗೂ ಏಪ್ರಿಲ್ 3ರಂದು ಪ. ಬಂಗಾಳ ಬಂದ್ ಸಂದರ್ಭದಲ್ಲಿ ಕಾಂಗ್ರೆ ಗೂಂಡಾಗಳ ಬಾಂಬ್ ಧಾಳಿಗೆ ತುತ್ತಾದ ಕಾಂ. ಹೃದಯಾನಂದ ಸಾಹುರವರಿಗೆ ಸಂತಾಪ ಸೂಚಿಸಿ ಸಭೆಯು ಒಂದು ನಿಮಿಷ ಮೌನ ಆಚರಿಸಿತು. ರಾಜ್ಯದ ರೈತ ಚಳುವಳಿಯಲ್ಲಿ, ಕಾರ್ಮಿಕ ಮುಷ್ಕರಗಳಲ್ಲಿ ಹಾಗೂ ಚಿಂತಾಮಣಿಯ ವಿದ್ಯಾರ್ಥಿಗಳ ಮುಷ್ಕರದ ಸಂದರ್ಭದಲ್ಲಿ ಪೋಲೀಸರ ಗುಂಡಿಗೆ ಬಲಿಯಾದ ಹುತಾತ್ಮರಿಗೂ ಸಭೆಯು ತನ್ನ ಶ್ರದ್ಧಾಂಜಲಿ ಅರ್ಪಿಸಿತು. ಬ್ರಿಟನ್ನಿನ ಜೈಲಿನಲ್ಲಿ ಉಪವಾಸ ಸತ್ಯಾಗ್ರಹ ಕೈಗೊಂಡು ಪ್ರಾಣತ್ಯಾಗ ಮಾಡಿದ ಬೋಬ್ಬಿ ಸ್ಯಾಂಡ್ಸ್ ಮತ್ತು ಇತರ ಸಂಗಾತಿಗಳಿಗೂ ರಾಜ್ಯಸಮಿತಿ ಸಭೆಯು ಶ್ರದ್ಧಾಂಜಲಿ ಅರ್ಪಿಸಿತು.

ರಾಷ್ಟ್ರ ಚಳುವಳಿ ಕಾರ್ಯಕ್ರಮ :

ಎಸ್. ಎಫ್. ಐ. ಅಖಿಲಭಾರತ ಅಧ್ಯಕ್ಷರಾದ ಕಾಂ. ಎಂ. ಎ. ಬೇಬಿಯವರು ಕೇಂದ್ರ ಸಮಿತಿ ಸಭೆಯ ತೀರ್ಮಾನಗಳನ್ನು ವಿವರಿಸಿದರು. ವಿದ್ಯಾರ್ಥಿ-ಯುವಜನರ ಬೇಡಿಕೆಗಳಿಗೆ ಸಂಬಂಧಿಸಿದಂತೆ 1 ಕೋಟಿ ಸಹಿಗಳನ್ನುಳ್ಳ ಮನವಿಯೊಂದನ್ನು ಪ್ರಧಾನ ಮಂತ್ರಿಯವರಿಗೆ ಸಲ್ಲಿಸಲಿದ್ದು ಇದಕ್ಕಾಗಿ ಕರ್ನಾಟಕದಲ್ಲಿ 50 ಸಹಸ್ರ ವಿದ್ಯಾರ್ಥಿಗಳ ಸಹಿಸಂಗ್ರಹಿಸಲು ರಾಜ್ಯಸಮಿತಿ ಸಭೆಯು ತೀರ್ಮಾನಿಸಿದೆ. ಜುಲೈ 15ರಿಂದ ಸಹಿ ಸಂಗ್ರಹ ಚಳುವಳಿಯನ್ನು ಪ್ರಾರಂಭಿಸಲಾಗುವುದು.

ಆಗಸ್ಟ್ 20ರಂದು ತಾಲ್ಲೂಕು ಮಟ್ಟದಲ್ಲಿ ಸಭೆ, ಮೆರವಣಿಗೆಗಳನ್ನು ನಡೆಸಲೂ, ಸೆಪ್ಟೆಂಬರ್ 1ರಂದು ಬೆಂಗಳೂರಿನಲ್ಲಿ ರಾಜ್ಯಮಟ್ಟದ ರ‍್ಯಾಲಿಯೊಂದನ್ನು ನಡೆಸಲೂ ರಾಜ್ಯಸಮಿತಿಯು ತೀರ್ಮಾನಿಸಿತು. ಈ ಮಧ್ಯೆ ವಿಶ್ವವಿದ್ಯಾಲಯ ಕೇಂದ್ರಗಳಲ್ಲೂ ಮೆರವಣಿಗೆಗಳನ್ನು ನಡೆಸಲಾಗುತ್ತದೆ. ದೆಹಲಿಯಲ್ಲಿ ಅಕ್ಟೋಬರ್ ಮೊದಲ ವಾರದಲ್ಲಿ ನಡೆಯುವ ಪಾರ್ಲಿಮೆಂಟ್ ಚಲೋ ಕಾರ್ಯಕ್ರಮದಲ್ಲಿ ಕರ್ನಾಟಕದಿಂದ ಎಸ್.ಎಫ್.ಐ. ಪರವಾಗಿ 50 ಪ್ರತಿನಿಧಿಗಳನ್ನು ಕಳುಹಿಸಲು ತೀರ್ಮಾನಿಸಲಾಯಿತು.

ಕ್ಯಾಪಿಟೇಷನ್ ಮತ್ತು ಡೊನೇಷನ್ ಫೀ ಸಂಪೂರ್ಣ ರದ್ದಾಗಬೇಕು, ಪಿ.ಯು.ಸಿ.ವರೆಗೂ ಉಚಿತ ಶಿಕ್ಷಣ ನೀಡಬೇಕು, ಖಾಸಗಿ ಮತ್ತು ಸರಕಾರಿ ಶಾಲಾ-ಕಾಲೇಜುಗಳೆರಡರಲ್ಲೂ ಏಕರೀತಿಯ ಶಿಕ್ಷಣ ಶುಲ್ಕ ಜಾರಿ ಮಾಡಬೇಕು, ಶಿಕ್ಷಣಕ್ಕಾಗಿ ರಾಜ್ಯದ ಮುಂಗಡ ಪತ್ರದಲ್ಲಿ ಶೇ. 35ರಷ್ಟನ್ನು ಮೀಸಲಿಡಬೇಕು, ಪ್ರತಿ ತಾಲ್ಲೂಕು ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೂ ಮತ್ತು ವಿದ್ಯಾರ್ಥಿನಿಯರಿಗೂ ಸರ್ಕಾರವು ಉಚಿತ ಹಾಸ್ಟೆಲ್‌ಗಳನ್ನು ಪ್ರಾರಂಭಿಸಬೇಕು, ಹಾಸ್ಟೆಲ್‌ಗಳಲ್ಲಿ ಓದುತ್ತಿರುವ ಕಾಲೇಜು ವಿದ್ಯಾರ್ಥಿಗಳ ಮಾಸಿಕ ವಿದ್ಯಾರ್ಥಿವೇತನವನ್ನು 175 ರೂ.ಗಳಿಗೂ ಮತ್ತು ಹೈಸ್ಕೂಲು ವಿದ್ಯಾರ್ಥಿಗಳಿಗೆ 100 ರೂ.ಗಳಿಗೂ ಏರಿಸಬೇಕು, ವಿದ್ಯಾಭ್ಯಾಸ ಮುಗಿದ ತಕ್ಷಣ ಉದ್ಯೋಗ ಕೊಡಬೇಕು ಮತ್ತು ಅದುವರೆವಿಗೆ ಉದ್ಯೋಗ ವಿನಿಮಯ ಕಚೇರಿಗಳಲ್ಲಿ ನೊಂದಾಯಿಸಿದ ಪ್ರತಿಯೊಬ್ಬ ನಿರುದ್ಯೋಗಿಗೂ ಮಾಸಿಕ ನಿರುದ್ಯೋಗ ಭತ್ಯೆ ನೀಡಬೇಕು, ಶಾಲಾಕಾಲೇಜುಗಳಲ್ಲಿ ಫೀ ವಿನಾಯಿತಿ ಪಡೆಯಲು ಬೇಕಾದ ಆದಾಯ ಮಿತಿಯನ್ನು ಹಿಂದುಳಿದ ಜಾತಿಯ ವಿದ್ಯಾರ್ಥಿಗಳಿಗೆ 12 ಸಾವಿರ ರೂ.ಗಳಿಗೂ, ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ವಿದ್ಯಾರ್ಥಿಗಳಿಗೆ 6 ಸಾವಿರ ರೂ.ಗಳಿಗೂ ಏರಿಸಬೇಕು, ಎಲ್ಲ ಶಾಲೆಗಳಲ್ಲಿ ಕಡ್ಡಾಯವಾಗಿ ಕನ್ನಡ ಮಾಧ್ಯಮ ವಿಭಾಗ ತೆರೆಯಬೇಕು ಮತ್ತು ಪ್ರತಿ ಕಾಲೇಜಿನಲ್ಲೂ ಕನಿಷ್ಟ ಕಲಾ ವಿದ್ಯಾರ್ಥಿಗಳಿಗಾದರೂ ಕನ್ನಡ ಮಾಧ್ಯಮ ವಿಭಾಗವನ್ನು ಪ್ರಾರಂಭಿಸಬೇಕು, ಗೋಕಾಕ್ ಆಯೋಗದ ವರದಿಯನ್ನು ತಕ್ಷಣ ಜಾರಿಗೊಳಿಸಬೇಕು, ಶಾಲಾ-ಕಾಲೇಜಿನಿಂದ ಪ್ರಾರಂಭವಾಗಿ ವಿಶ್ವವಿದ್ಯಾಲಯ ಮಟ್ಟದವರೆಗಿನ ವಿದ್ಯಾರ್ಥಿ ಸಂಘಗಳನ್ನು ಸಕ್ರಿಯಗೊಳಿಸಬೇಕು ಎಂಬ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ರಾಜ್ಯದ ಮುಖ್ಯಮಂತ್ರಿಗಳಿಗೆ ಮತ್ತು ರಾಜ್ಯಪಾಲರಿಗೆ ಸೆಪ್ಟೆಂಬರ್ 1ರಂದು ಮನವಿಪತ್ರ ಅರ್ಪಿಸಲಾಗುವುದು.

ಖಂಡನಾ ನಿರ್ಣಯಗಳು :

1. ವಿರೋಧ ಪಕ್ಷಗಳ ಮತ್ತು ಸಾಮೂಹಿಕ ಸಂಘಟನೆಗಳ ಪ್ರಚಾರದ ಹಕ್ಕನ್ನು ಮೊಟಕುಗೊಳಿಸಲು ಗೋಡೆ ಬರಹ ಮತ್ತು ಭಿತ್ತಿಪತ್ರಗಳನ್ನು ಅಂಟಿಸುವುದನ್ನು ನಿಷೇಧಿಸುವ ರಾಜ್ಯಪಾಲರ ಸುಗ್ರೀವಾಜ್ಞೆಯನ್ನು ಸಭೆಯು ಖಂಡಿಸಿತು. ಈ ಆಜ್ಞೆಯನ್ನು ತಕ್ಷಣ ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಲಾಯಿತು.

2. ರಾಜಸ್ತಾನದ ಕಾಂಗ್ರೆಸ್ (ಐ) ಸರ್ಕಾರದ ಮಂತ್ರಿಯೊಬ್ಬರು ಮತ್ತು ಮಧ್ಯಪ್ರದೇಶದ ರಾಜ್ಯಪಾಲರು ತಮ್ಮ ಅಪ್ರಾಪ್ತ ಬಾಲಕಿಯರಿಗೆ ವಿವಾಹ ನಡೆಸಿರುವುದನ್ನು ಸಭೆಯು ತೀವ್ರವಾಗಿ ಖಂಡಿಸಿತು. ಈ ಮೂಲಕ ಬಾಲ್ಯವಿವಾಹ ಕಾಯಿದೆಯನ್ನು ಮುರಿದಿರುವ ಇವರಿಗೆ ತಕ್ಷಣ ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಲಾಯಿತು.

3. ಕಾಂಗ್ರೆ ಎಂ.ಪಿ. ಎಫ್.ಎಂ. ಖಾನ್‌ರವರು ಜೂನ್ 12ರಂದು ಮಧ್ಯರಾತ್ರಿ ಕುಡಿದು ಸಾರ್ವಜನಿಕ ರಸ್ತೆಯಲ್ಲಿ ಅಸಭ್ಯವಾಗಿ ವರ್ತಿಸಿದರು ಮತ್ತು ಪೋಲೀಸ್ ಪೇದೆಗಳ ಮೇಲೆ ಕೈಮಾಡಿದರೆಂಬ ಆಪಾದನೆ ಬಗ್ಗೆ ತನಿಖೆ ನಡೆಸುವಂತೆ ಒತ್ತಾಯಿಸಿ ಸಿ. ಪಿ. ಐ. (ಎಂ) ಬೆಂಗಳೂರು ಜಿಲ್ಲಾ ಸಮಿತಿ ನೇತೃತ್ವದಲ್ಲಿ ಜೂನ್ 15ರಂದು ಐ. ಜಿ. ಪಿ. ಕಚೇರಿಯೆದುರು ಪ್ರತಿಭಟನಾ ಪ್ರದರ್ಶನ ನಡೆಸುತ್ತಿದ್ದಾಗ ಪೋಲೀಸ್ ಕಮೀಷನರ್ ಮತ್ತಿತರ ಇನ್ಸ್‌ಪೆಕ್ಟರುಗಳು ಎಸ್. ಎಫ್. ಐ. ಮುಖಂಡರು ಹಾಗೂ ಇತರರ ಮೇಲೆ ದೌರ್ಜನ್ಯ ನಡೆಸಿದ್ದನ್ನು ಸಭೆಯು ಉಗ್ರವಾಗಿ ಖಂಡಿಸಿತು. ಅಧಿಕಾರ ವಹಿಸಿದಾಗಿನಿಂದಲೂ ಆಳುವ ಪಕ್ಷವನ್ನು ಬೆಂಬಲಿಸುತ್ತಾ ಸಮಾಜಘಾತುಕರಿಗೆ ಆಶ್ರಯ ನೀಡುತ್ತಿರುವ ಪೋಲೀಸ್ ಕಮೀಷನರ್ ನಿಜಾಮುದ್ದೀನ್‌ರವರನ್ನು ಕೂಡಲೇ ಆ ಸ್ಥಾನದಿಂದ ವಜಾ ಮಾಡಬೇಕೆಂದು ಸಭೆಯು ಒತ್ತಾಯಿಸಿತು.

ಶೀಘ್ರ ತನಿಖೆಗೆ ಆಗ್ರಹ

ದ. ಕ. ಜಿಲ್ಲೆಯ ಪುತ್ತೂರಿನ ಸರ್ಕಾರಿ ಹಾಸ್ಟೆಲೊಂದರ ವಿದ್ಯಾರ್ಥಿನಿಯಾಗಿದ್ದ ಕುಮಾರಿ ಸೀತಾಳ ನಿಗೂಢ ಸಾವಿನ ಪ್ರಕರಣದ ತನಿಖೆಯನ್ನು ಶೀಘ್ರವಾಗಿ ಮುಗಿಸಬೇಕೆಂದು ಮತ್ತು ತನಿಖೆ ಮುಗಿಯುವವರೆಗೆ ಹಾಸ್ಟೆಲಿನ ವಾರ್ಡನ್‌ರವರನ್ನು ಸಸ್ಪೆಂಡ್ ಮಾಡಬೇಕೆಂದು ರಾಜ್ಯಸಮಿತಿ ಸಭೆಯು ಒತ್ತಾಯಿಸಿತು.

ಎಸ್.ಎಸ್.ಎಲ್.ಸಿ. ಫಲಿತಾಂಶ

80-81ನೇ ಸಾಲಿನ ಎಸ್. ಎಸ್. ಎಲ್. ಸಿ. ಪರೀಕ್ಷೆಗಳಲ್ಲಿ ಕೇವಲ ಶೇ. 26 ಮಂದಿ ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದು ಕಳೆದ ವರ್ಷಕ್ಕಿಂತ ಫಲಿತಾಂಶವು ಸುಮಾರು ಅರ್ಧದಷ್ಟು ಇಳಿದಿರುವುದನ್ನು ಸಭೆಯು ಗಂಭೀರವಾಗಿ ಪರಿಗಣಿಸಿತು. ಹೊಸ ಪಠ್ಯಕ್ರಮದ ಬೋಧನೆಯ ಬಗ್ಗೆ ಅಧ್ಯಾಪಕರಿಗೆ ಸೂಕ್ತ ತರಬೇತಿ ನೀಡದಿದ್ದುದೇ ಈ ಪರಿಸ್ಥಿತಿಗೆ ಕಾರಣವೆಂದು ರಾಜ್ಯಸಮಿತಿಯು ಅಭಿಪ್ರಾಯಪಟ್ಟಿತು. ಈ ಲೋಪವನ್ನು ಸರಿಪಡಿಸಲು ಶಿಕ್ಷಣ ಇಲಾಖೆಯು ತಕ್ಷಣ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸಭೆಯು ಒತ್ತಾಯಿಸಿತು.

o

ಚಾರಿತ್ರಿಕ ಚಳುವಳಿ

ಎಸ್. ಎಫ್. ಐ. ರಾಜ್ಯಸಮಿತಿ ಸಭೆಯ ಅಂಗವಾಗಿ ಜೂನ್ 18ರಂದು ಬೆಂಗಳೂರಿನಲ್ಲಿ ನಡೆದ ಪತ್ರಿಕಾ ಗೋಷ್ಠಿಯೊಂದರಲ್ಲಿ ಅಖಿಲ ಭಾರತ ಅಧ್ಯಕ್ಷರಾದ ಎಂ. ಎ. ಬೇಬಿಯವರು ಎಸ್. ಎಫ್. ಐ. ಮತ್ತು ಡಿ. ವೈ. ಎಫ್. ಐ. ಸಂಘಟನೆಗಳು ಜುಲೈನಿಂದ ಪ್ರಾರಂಭಿಸಲಿರುವ ರಾಷ್ಟ್ರವ್ಯಾಪಿ ಚಳುವಳಿಯ ಬಗ್ಗೆ ವಿವರಿಸುತ್ತಾ ವಿದ್ಯಾರ್ಥಿ ಚಳುವಳಿಯ ಇತಿಹಾಸದಲ್ಲಿ ಇದೊಂದು ಚಾರಿತ್ರಿಕ ದಾಖಲೆಯಾಗುವುದೆಂದು ಹೇಳಿದರು. ಸ್ವಾತಂತ್ರ್ಯ ನಂತರದಲ್ಲಿ ಇದುವರೆಗೆ ಇಂತಹ ರಾಷ್ಟ್ರವ್ಯಾಪಿ ಚಳುವಳಿಯನ್ನು ಸಂಘಟಿಸಿಲ್ಲವೆಂದು ತಿಳಿಸಿದ ಅವರು ಈ ಚಳುವಳಿಯನ್ನು ಮತ್ತಷ್ಟು ವಿಶಾಲಗೊಳಿಸಲು ಇತರೆ ವಿದ್ಯಾರ್ಥಿ-ಯುವಜನ ಸಂಘಟನೆಗಳೊಂದಿಗೆ ಐಕ್ಯಕಾರ್ಯಾಚರಣೆ ನಡೆಸಲು ಪ್ರಯತ್ನಿಸಲಾಗುತ್ತಿದೆಯೆಂದು ಹೇಳಿದರು. ಈ ಪ್ರಯತ್ನ ಯಶಸ್ವಿಯಾದರೆ ವಿದ್ಯಾರ್ಥಿ-ಯುವಜನರ ಈ ಐಕ್ಯಹೋರಾಟವು ಮತ್ತೊಂದು ದಾಖಲೆಯಾಗುವುದೆಂದು ನುಡಿದರು. ದೇಶದಲ್ಲಿ ತೀವ್ರವಾಗುತ್ತಿರುವ ಬೆಲೆ ಏರಿಕೆ, ನಿರುದ್ಯೋಗ, ಅನಕ್ಷರತೆ ಇತ್ಯಾದಿ ಸಮಸ್ಯೆಗಳಿಂದ ವಿದ್ಯಾರ್ಥಿ ಯುವಜನರ ಗಮನವನ್ನು ಬೇರೆ ಕಡೆಗೆ ಸೆಳೆಯಲು ಪ್ರತಿಗಾಮಿ ಶಕ್ತಿಗಳು ಪ್ರಯತ್ನಿಸುತ್ತಿವೆಯೆಂದು ಹೇಳಿದ ಬೇಬಿಯವರು ಅಸ್ಸಾಂ ಚಳುವಳಿ ಮತ್ತು ಗುಜರಾತಿನ ಮೀಸಲಾತಿ ವಿರೋಧಿ ಚಳುವಳಿಗಳನ್ನು ಉದಾಹರಿಸಿದರು. ಈ ಸಂದರ್ಭದಲ್ಲಿ ಎಸ್. ಎಫ್. ಐ. ಸಂಘಟನೆಯ 'ಸರ್ವರಿಗೂ ಶಿಕ್ಷಣ, ಸರ್ವರಿಗೂ ಉದ್ಯೋಗ' ಎಂಬ ಚಳುವಳಿಯ ಕಾರ್ಯಕ್ರಮವು ಮಹತ್ವಪೂರ್ಣವಾಗಿದೆಯೆಂದು ಹೇಳಿದರು.

ಅದೇ ದಿನ ಸಂಜೆ ಎಸ್.ಎಫ್.ಐ. ಕಾರ್ಯಕರ್ತರ ಸಭೆಯೊಂದನ್ನು ನಡೆಸಲಾಯಿತು. ಈ ಸಭೆಯಲ್ಲಿ ಎಸ್. ಆರ್. ಆರಾಧ್ಯ ರಾಜ್ಯಸಮಿತಿ ಸಭೆಯ ತೀರ್ಮಾನಗಳ ಬಗ್ಗೆ ವಿವರಿಸಿದರು. ಕಾಮ್ರೇಡ್ ಎಂ. ಎ. ಬೇಬಿಯವರು ಪ್ರಸಕ್ತ ರಾಜಕೀಯ ಪರಿಸ್ಥಿತಿಯನ್ನು ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಮೇಲೆ ನಡೆಯುತ್ತಿರುವ ಧಾಳಿಯನ್ನು ವಿವರಿಸಿದರು. ಈ ಧಾಳಿಯ ಒಂದು ಭಾಗವಾಗಿ ಎಸ್.ಎಫ್.ಐ. ಕಾರ್ಯಕರ್ತರ ಮೇಲೆ ದೇಶದ ನಾನಾಕಡೆ ಅನೇಕ ಹಲ್ಲೆಗಳು ನಡೆಯುತ್ತಿವೆಯೆಂದು ಹೇಳಿದರು.

ಗಂಗಾವತಿ ವಿದ್ಯಾರ್ಥಿಗಳ ಹೋರಾಟಕ್ಕೆ ಬೆಂಬಲ

ರಾಯಚೂರು ಜಿಲ್ಲೆಯ ಗಂಗಾವತಿಯಲ್ಲಿರುವ ಕಾಮರ್ಸ್ ಕಾಲೇಜಿನಲ್ಲಿ ಪಿ.ಯು.ಸಿ. ತರಗತಿಗಳೇ ಇಲ್ಲ. ತಮ್ಮ ತಾಲ್ಲೂಕಿನಲ್ಲೇ ಇರುವ ಕಾಮರ್ಸ್ ಕಾಲೇಜಿನಲ್ಲಿ ವ್ಯಾಸಂಗ ಮಾಡಲು ವಿದ್ಯಾರ್ಥಿಗಳಿಗೆ ಅವಕಾಶವಿಲ್ಲ. ಪಿ.ಯು.ಸಿ. ವಾಣಿಜ್ಯ ವಿಷಯಗಳನ್ನು ಕಲಿಯಲು ಬೇರೆ ಪ್ರದೇಶಗಳಿಗೆ ಹೋಗಬೇಕಾಗಿದೆ. ಇದು ಬಹಳ ವಿಪರ್ಯಾಸವಾಗಿದೆ.

ಆದ್ದರಿಂದಗಂಗಾವತಿಯಕಾಮರ್ಸ್ ಕಾಲೇಜಿನಲ್ಲಿ ಪಿ. ಯು. ಸಿ. ವಿಭಾಗ ಪ್ರಾರಂಭಿಸಬೇಕೆಂದು ಅಲ್ಲಿನವಿದ್ಯಾರ್ಥಿಗಳು ಎಸ್.ಎಫ್.ಐ. ನೇತೃತ್ವದಲ್ಲಿ ಹೋರಾಟ ನಡೆಸುತ್ತಿದ್ದಾರೆ. ಜುಲೈ 6ರಿಂದ ಆಮರಣಾಂತ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದ್ದಾರೆ.

ಗಂಗಾವತಿ ವಿದ್ಯಾರ್ಥಿಗಳ ನ್ಯಾಯಯುತ ಬೇಡಿಕೆಯನ್ನು ತಕ್ಷಣ ಈಡೇರಿಸಬೇಕೆಂದು ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್.ಎಫ್.ಐ.) ರಾಜ್ಯಸಮಿತಿ ನಿಯೋಗ ಕಾಲೇಜಿಯೇಟ್ ಎಜುಕೇಷನ್ ಡೈರೆಕ್ಟರ್‌ರವರಿಗೂ ಕುಲಪತಿಗಳಾದ ರಾಜ್ಯಪಾಲರಿಗೂ ಮನವಿ ಸಲ್ಲಿಸಿದೆ. ಡೈರೆಕ್ಟರ್ ಕಛೇರಿಯ ಮುಂದೆ ರಾಜ್ಯ ಭವನದ ಮುಂದೆ ಎಸ್. ಎಫ್. ಐ. ಕಾರ್ಯಕರ್ತರು ಪ್ರದರ್ಶನ ನಡೆಸಿದರು.

ಶಿಕ್ಷಣ ಮಂತ್ರಿಯ ಹೇಳಿಕೆಯ ಖಂಡನೆ

ಕರ್ನಾಟಕ ರಾಜ್ಯದ ಶಿಕ್ಷಣ ಮಂತ್ರಿ ಜಿ. ಬಿ. ಶಂಕರರಾವ್‌ರವರು ಇನ್ನು ಮುಂದೆ ಹೊಸ ಪದವಿ ಕಾಲೇಜುಗಳನ್ನು ಪ್ರಾರಂಭಿಸದಿರಲು ಸರಕಾರವು ನಿರ್ಧರಿಸಿದೆಯೆಂದು ಹೇಳಿಕೆ ನೀಡಿದ್ದಾರೆ. ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆಯು ಹೆಚ್ಚುತ್ತಿರುವುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ.

ದೇಶದಲ್ಲಿನ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯೇ ನಿರುದ್ಯೋಗ ಸಮಸ್ಯೆಯ ಮೂಲಕಾರಣವಾಗಿದೆ. ಇದಕ್ಕೆ ಶಿಕ್ಷಣ ವ್ಯವಸ್ಥೆಯು ಸ್ವಲ್ಪ ಮಟ್ಟಿಗೆ ಕಾರಣವಾಗಿರಬಹುದು. ವೈಜ್ಞಾನಿಕ ವೃತ್ತಿಪರ ಶಿಕ್ಷಣಪದ್ಧತಿಯನ್ನು ರೂಪಿಸುವುದು ಅತ್ಯಗತ್ಯ. ಆದರೆ ಈ ನೆಪದಲ್ಲಿ ಈಗಿರುವ ವಿದ್ಯಾಭ್ಯಾಸದ ಅವಕಾಶಗಳನ್ನು ಮೊಟಕುಗೊಳಿಸುವುದು ಸರಿಯಲ್ಲ. ಈಗಾಗಲೇ ಡೊನೇಷನ್ ಕ್ಯಾಪಿಟೇಷನ್ ಹಾವಳಿಯಿಂದ ಬಡವಿದ್ಯಾರ್ಥಿಗಳು ಉನ್ನತ ಶಿಕ್ಷಣ ಅವಕಾಶಗಳಿಂದ ವಂಚಿತರಾಗಿದ್ದಾರೆ. ಸರ್ಕಾರದ ಈ ಕ್ರಮದಿಂದ ಉನ್ನತ ಶಿಕ್ಷಣದ ಪೈಪೋಟಿ ಮತ್ತಷ್ಟು ಹೆಚ್ಚುತ್ತದೆ. ಆದ್ದರಿಂದ ಸರ್ಕಾರವು ತನ್ನ ನಿರ್ಧಾರವನ್ನು ಕೂಡಲೇ ಹಿಂತೆಗೆದುಕೊಳ್ಳಬೇಕೆಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ರಾಜ್ಯಶಾಖೆಯು ತೀವ್ರವಾಗಿ ಒತ್ತಾಯಿಸುತ್ತದೆ. ಸರಕಾರವು ತನ್ನ ನೀತಿಯನ್ನು ಬದಲಾಯಿಸದಿದ್ದಲ್ಲಿ ಉಗ್ರ ಹೋರಾಟ ಪ್ರಾರಂಭಿಸಬೇಕಾಗುತ್ತದೆ.

ಇದೇ ಸಂದರ್ಭದಲ್ಲಿ ಕ್ಯಾಪಿಟೇಷನ್ ಮತ್ತು ಡೊನೇಷನ್ ಪದ್ಧತಿಯನ್ನು ಕೂಡಲೇ ಸಂಪೂರ್ಣವಾಗಿ ರದ್ದುಗೊಳಿಸಬೇಕೆಂದು ಎಸ್.ಎಫ್.ಐ. ಪರವಾಗಿ ಪ್ರಧಾನ ಕಾರ್ಯದರ್ಶಿ ಕಾಂ. ಎಸ್. ಆರ್. ಆರಾಧ್ಯ ಮತ್ತು ಉಪಾಧ್ಯಕ್ಷ ಕಾಂ. ಎನ್. ರಾಜಣ್ಣ ಸರ್ಕಾರವನ್ನು ಒತ್ತಾಯಿಸಿದ್ದಾರೆ.

○

ಮೈಕೋ ಸಂಘದ ಚುನಾವಣೆಗಾಗಿ ಒತ್ತಾಯ

ಸಂಘಟನೆಯನ್ನು ಕಟ್ಟುವ ಮೂಲಭೂತ ಹಕ್ಕನ್ನು ಸ್ವತಃ ಸರಕಾರ ಮೈಕೋ ಸಂಘದ ಚುನಾವಣೆ ವಿಷಯದಲ್ಲಿ ಹತ್ತಿಕ್ಕುತ್ತಿದೆ. ಚುನಾವಣೆಗೆ ಎಲ್ಲ ಸಿದ್ಧತೆಗಳು ಮುಗಿದಿದ್ದರೂ ಚುನಾವಣೆಗೆ ಅವಕಾಶ ಕೊಡುತ್ತಿಲ್ಲ. ಖಾನ್ ನೇತೃತ್ವದ ಗೂಂಡಾಗಳು ಮೈಕೋ ಕಾರ್ಖಾನೆಯ ಕಾರ್ಮಿಕರನ್ನು ಹೆದರಿಸುತ್ತಿದ್ದಾರೆ. ಹಲ್ಲೆ ಮಾಡುತ್ತಿದ್ದಾರೆ.

ಚುನಾವಣೆಯು ಜರುಗಿದರೆ ಪ್ರಸಕ್ತ ಅಧ್ಯಕ್ಷ ಕಾಂ. ಸೂರ್ಯನಾರಾಯಣರಾವ್‌ರೇ ನಿಸ್ಸಂಶಯವಾಗಿ ಚುನಾಯಿತರಾಗುವರೆಂದು ಸರಕಾರಕ್ಕೆ ಗೊತ್ತಿದೆ. ಇದು ಸರಕಾರಕ್ಕೆ ಬೇಡವಾದ ವಿಷಯ. ಲೇಬರ್ ಕಮೀಷನರ್‌ರು ಚುನಾವಣೆ ನಡೆಸುವುದಕ್ಕೆ ಶಿಫಾರಸು ಮಾಡಿದ್ದರೂ ಸರಕಾರ ಕಿವಿಗೊಡುತ್ತಿಲ್ಲ.

ಸರಕಾರ ಯೂನಿಯನ್‌ನ ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುವುದನ್ನು ಬಿಟ್ಟು ಕೂಡಲೇ ಸಂಘದ ಚುನಾವಣೆ ನಡೆಸುವದಕ್ಕೆ ಅವಕಾಶ ಕೊಡಬೇಕು. ಇಲ್ಲವಾದಲ್ಲಿ ಬೆಂಗಳೂರ್ ಈಸ್ಟ್ ಇಂಡಸ್ಟ್ರಿಯಲ್ ವರ್ಕರ್ಸ್ ಯೂನಿಯನ್ ಕಾರ್ಮಿಕರು ಒಂದು ದಿನ ಪ್ರತಿಭಟನಾ ಮುಷ್ಕರ ಮಾಡಬೇಕಾದೀತೆಂದು ಯೂನಿಯನ್ ಪರವಾಗಿ ಕಾಂ. ಜಾನ್‌ವಿನ್ಸೆಂಟ್ ಒತ್ತಾಯಿಸಿದ್ದಾರೆ.

ಇದೇ ವಿಷಯಕ್ಕಾಗಿ ಒತ್ತಾಯಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೆ. ಆರ್. ಪುರಂ ಲೋಕಲ್ ಕಮಿಟಿಯ ಕಾರ್ಯದರ್ಶಿ ಕಾಂ. ಕೃಷ್ಣಕುಮಾರ್ ಹೇಳಿಕೆಯೊಂದನ್ನು ಹೊರಡಿಸಿದ್ದಾರೆ.

ಇವರಲ್ಲದೇ ಮೈಸೂರು ಮಿಲ್ಸ್ ಹತ್ತಿಗಿರಣಿ ಕಾರ್ಮಿಕರ ಸಂಘದ ಕಾರ್ಯದರ್ಶಿ ಕಾಂ. ಕೆ. ಮುನಿಸ್ವಾಮಿ, ಆಟೋರಿಕ್ಷಾ ಯೂನಿಯನ್‌ನ ಕಾರ್ಯದರ್ಶಿ ಕಾಂ. ಎ. ವಿ. ರಮೇಶ್ ಚುನಾವಣೆ ಶೀಘ್ರ ನಡೆಸಲು ಒತ್ತಾಯಿಸಿದ್ದಾರೆ.

●

ಸಂಸೆ ಮೊಕದ್ದಮೆಯ ತೀರ್ಪು

ಚಿಕ್ಕಮಂಗಳೂರು ಜಿಲ್ಲೆಯ ಸಂಸೆಯ ಟೀ ತೋಟದ ಕಾರ್ಮಿಕರು 1980 ಮಾರ್ಚಿಯಿಂದ ಮೇಯವರೆಗೆ 60 ದಿವಸಗಳ ಮುಷ್ಕರ ನಡೆಸಿದರು. ಈ ಮುಷ್ಕರವನ್ನು ಹತ್ತಿಕ್ಕಲು ಪೋಲೀಸರು ಪ್ರಯತ್ನಿಸುವಾಗ ಗಲಾಟೆಯಾಗಿ ಕೆ. ಪಿ. ಪಿ. ಡಬ್ಲ್ಯು. ಯೂನಿಯನ್ನಿನ ಉಪಾಧ್ಯಕ್ಷ ಕಾಂ. ಎ. ಸಿ. ಕೇಶವ, ಉಪಕಾರ್ಯದರ್ಶಿ ಕಾಂ. ಕೆ. ಸುಕುಮಾರ್ ಸೇರಿದಂತೆ 46 ಮಂದಿಯ ಮೇಲೆ ಪೋಲೀಸರು ಮೊಕದ್ದಮೆ ಹೂಡಿದ್ದರು. ಜೂನ್ 8ರಿಂದ ಈ ಮೊಕದ್ದಮೆಯ ವಿಚಾರಣೆಯು ಚಿಕ್ಕಮಂಗಳೂರಿನ ಸೆಷನ್ಸ್ ನ್ಯಾಯಾಲಯದಲ್ಲಿ ನಡೆದು, ನ್ಯಾಯಾಲಯವು 46 ಮಂದಿಯನ್ನೂ ಆರೋಪಗಳಿಂದ ಖುಲಾಸೆ ಮಾಡಿ ಬಿಡುಗಡೆ ಮಾಡಿದೆ. ○

ಎಸ್.ಎಫ್.ಐ. ಪ್ರತಿಭಟನೆ

ದ.ಕ. ಜಿಲ್ಲೆಯ ಕೆಲವು ಕಾಲೇಜುಗಳಲ್ಲಿ ವಿದ್ಯಾರ್ಥಿ ಸಂಘಗಳಿಗೆ ನಡೆಯುತ್ತಿರುವ ಚುನಾವಣೆಗಳನ್ನು ರದ್ದುಗೊಳಿಸುವ ಯೋಜನೆಯ ವಿರುದ್ಧ ಎಸ್.ಎಫ್.ಐ. ದ.ಕ. ಜಿಲ್ಲಾಸಮಿತಿ ತೀವ್ರವಾಗಿ ಪ್ರತಿಭಟಿಸಿದೆ. ವಿದ್ಯಾರ್ಥಿಗಳಿಗೆ ಈಗಿರುವ ಕನಿಷ್ಟ ಪ್ರಜಾಪ್ರಭುತ್ವ ಹಕ್ಕುಗಳನ್ನೂ ಇದರಿಂದ ಕಸಿದುಕೊಂಡಂತಾಗುವದೆಂದು ಸಮಿತಿ ಅಭಿಪ್ರಾಯಪಟ್ಟಿದೆ.

7-6-81ರಂದು ಸೇರಿದ ಎಸ್.ಎಫ್.ಐ.ನ ದ.ಕ. ಜಿಲ್ಲಾಸಮಿತಿಯ ಸಭೆಯು, ಖಾಸಗಿ ಶಾಲಾ ಕಾಲೇಜುಗಳಲ್ಲಿ ವಸೂಲಿ ಮಾಡುತ್ತಿರುವ ಕ್ಯಾಪಿಟೇಷನ್ ಫೀ, ಡೊನೇಷನ್ ಪದ್ಧತಿಯನ್ನು ಕೂಡಲೇ ರದ್ದುಗೊಳಿಸುವಂತೆ ಒತ್ತಾಯಿಸಿದೆ. ಈ ವರ್ಷದ ಎಸ್.ಎಸ್.ಎಲ್.ಸಿ. ಫಲಿತಾಂಶದ ಬಗ್ಗೆ ಸಭೆಯು ತೀವ್ರ ಕಳವಳ ವ್ಯಕ್ತಪಡಿಸಿತು. ಯಾವದೇ ಪರಿಶೀಲನೆ ನಡೆಸದೆ ಹೆಚ್ಚಿನ ಜನ ಅಧ್ಯಾಪಕರೂ ಅರ್ಥಮಾಡಿಕೊಳ್ಳಲು ಕಷ್ಟವಾದ ಹೊಸ ಸ್ಕೀಂನ್ನು ಒಮ್ಮಿಂದೊಮ್ಮೆಲೇ ಜಾರಿಮಾಡಿದುದರಿಂದ ವಿದ್ಯಾರ್ಥಿಗಳು ಪರೀಕ್ಷೆಗೆ ತಕ್ಕ ಸಿದ್ಧತೆಗಳನ್ನು ಮಾಡಿಕೊಳ್ಳಲು ಸಾಧ್ಯವಾಗಿರಲಿಲ್ಲ. ಹೆಚ್ಚಿನ ವಿದ್ಯಾರ್ಥಿಗಳು ಅನುತ್ತೀರ್ಣರಾಗಲು ಇದು ಕಾರಣವಾಗಿರುವುದರಿಂದ ಈ ರೀತಿ ಸ್ಕೀಂ ಬದಲಾಯಿಸುವದನ್ನು ನಿಲ್ಲಿಸಬೇಕೆಂದು ಸಮಿತಿಯು ಸರಕಾರವನ್ನು ಒತ್ತಾಯಪಡಿಸಿದೆ.

ಸಭೆಯ ಅಧ್ಯಕ್ಷತೆಯನ್ನು ಕಾಂ. ರತ್ನಾಕರ ವಹಿಸಿದ್ದರು. ಪ್ರಾರಂಭದಲ್ಲಿ ಜಿಲ್ಲಾ ಕಾರ್ಯದರ್ಶಿ ಕಾಂ. ಪಿ. ಉಮೇಶ್ ಭಂಡಾರಿ ಸ್ವಾಗತಿಸಿದರು. ಎಸ್. ಎಫ್. ಐ.ನ ರಾಜ್ಯ ಸಮಿತಿ ಅಧ್ಯಕ್ಷ ಕಾಂ. ಆರ್. ಜಯಕುಮಾರ್ ಸಭೆಯಲ್ಲಿ ಪಾಲ್ಗೊಂಡಿದ್ದರು.

●

ಹೋರಾಟಕ್ಕೆ ಬೆಂಬಲ

16-5-81 ರಿಂದ ನ್ಯಾಯವಾದ ಬೇಡಿಕೆಗಳಿಗೋಸ್ಕರ ಮುಷ್ಕರ ನಡೆಸುತ್ತಿರುವ ಮಂಗಳೂರಿನ ಕೆನರಾ ಟೈಲ್ ವರ್ಕರ್ಸ್‌ನ ಕಾರ್ಮಿಕರಿಗೆ ಎಸ್. ಕೆ. ಪ್ರೆಸ್ ವರ್ಕರ್ಸ್ ಯೂನಿಯನ್ನಿನ ಪರವಾಗಿ ಒಂದು ಮೂಟೆ ಅಕ್ಕಿಯನ್ನು ಸಹಾಯವಾಗಿ ಕೊಡಲಾಗಿದೆ. ಟೈಲ್ ವರ್ಕರ್ಸ್ ಕಾರ್ಮಿಕರ ಬೆಂಬಲಾರ್ಥ 22-6-1981ರಂದು ಪ್ರೆಸ್ ಕಾರ್ಮಿಕರು ಮೆರವಣಿಗೆ ಹೊರಡಿಸಿದ್ದರು ಮತ್ತು ಇವರ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿದ್ದಾರೆ.

○

ಚಲನಚಿತ್ರ ಪ್ರಶಸ್ತಿ ಆಯ್ಕೆ ವಿರುದ್ಧ ಕಲಾವಿದರ ಪ್ರತಿಭಟನೆ

ಚಲನ ಚಿತ್ರಗಳಿಗೆ ಪ್ರಶಸ್ತಿಗಳನ್ನು ನೀಡಲು ರಾಜ್ಯಸರ್ಕಾರವು ನೇಮಿಸಿರುವ ತೀರ್ಪುಗಾರರ ಮಂಡಳಿ ಉತ್ತಮ ಚಿತ್ರಗಳನ್ನು ಉದ್ದೇಶಪೂರ್ವಕವಾಗಿ ಕಡೆಗಣಿಸಿ ಕಳಪೆ ಚಿತ್ರಗಳಿಗೆ ಪ್ರಶಸ್ತಿ ನೀಡಿರುವುದನ್ನು ಪ್ರತಿಭಟಿಸಿ ಚಿತ್ರಪ್ರೇಮಿಗಳು ಮತ್ತು ಕಲಾವಿದರು 3-7-81ರಂದು "ಬಾದಾಮಿ ಹೌಸಿನ" ಮುಂದೆ ಪ್ರತಿಭಟನಾ ಪ್ರದರ್ಶನ ನಡೆಸಿದರು.

ಈ ಸಮಿತಿಯು 1978-79 ಮತ್ತು 1979-80ರ ಪ್ರಶಸ್ತಿಗಳನ್ನು ಪ್ರಕಟಿಸಿದೆ. 1980-81ರ ಸಾಲಿಗೆ ಪ್ರಶಸ್ತಿಗಳನ್ನು ಆಯ್ಕೆ ಮಾಡಲು ತೀರ್ಪುಗಾರರ ಮಂಡಳಿ ಬಾದಾಮಿ ಹೌಸಿನಲ್ಲಿ ಚಿತ್ರಗಳನ್ನು ವೀಕ್ಷಿಸುತ್ತಿತ್ತು. ಸುಮಾರು 150 ಪ್ರದರ್ಶನಕಾರರು ಪೋಲೀಸರ ಕಣ್ಣುತಪ್ಪಿಸಿ ಚಿತ್ರಪ್ರದರ್ಶನ ನಡೆಯುತ್ತಿದ್ದ ಥಿಯೇಟರ್ ಬಳಿಗೆ ನುಗ್ಗಿ "ಕುತಂತ್ರ ತೀರ್ಪುಗಾರರಿಗೆ ಧಿಕ್ಕಾರ" "ರಾಜಕೀಯ ಬೇಡ ಪ್ರಶಸ್ತಿಬೇಕು..." "ಪ್ರಶಸ್ತಿ ಸಮಿತಿಯಲ್ಲಿ ತಜ್ಞರಿರಬೇಕು ಅಜ್ಞರಲ್ಲ..." "ಮೂರ್ಖರ ಸಂತೆಯಲ್ಲಿ ಪ್ರಶಸ್ತಿಗಳ ಹರಾಜು" ಮುಂತಾದ ಘೋಷಣೆಗಳನ್ನು ಹಾಕಿದರು.

ತೀರ್ಪುಗಾರರ ಸಮಿತಿಯ ಅಧ್ಯಕ್ಷ ವಿಜಯ ಸಾಸನೂರು ಅವರು ಹೊರಬಂದು ಪ್ರದರ್ಶನಕಾರರು ನೀಡಿದ ಕರಪತ್ರ ಮತ್ತು ಮನವಿಪತ್ರಗಳನ್ನು ತೆಗೆದುಕೊಂಡು ಈ ವಿಷಯವನ್ನು ಸರ್ಕಾರದ ಗಮನಕ್ಕೆ ತರುವುದಾಗಿ ತಿಳಿಸಿದರು. ಪ್ರದರ್ಶನಕಾರರು ಹೊರಬಂದು ಮತ್ತೆ ಘೋಷಣೆಗಳನ್ನು ಕೂಗಿ ಚದುರಿದರು.

○

ಶಿವಮೊಗ್ಗಾ ಜಿಲ್ಲಾ ಸಮಿತಿ ಸಭೆ

ತಾ. 20-6-81ರಂದು ಜಿಲ್ಲಾ ಕಾರ್ಯದರ್ಶಿಗಳಾದ ಕೆ. ಚಂದು ಕುಟ್ಟಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಕೆಳಕಂಡ ತೀರ್ಮಾನಗಳನ್ನು ಕೈಗೊಂಡರು.

1. ಸಚಿವ ಇಬ್ರಾಹಿಂ ಮತ್ತು ಸಹಚರರು ನಡೆಸಿದ ಅಕ್ರಮ, ಅತ್ಯಾಚಾರ, ಹಿಂಸೆ ಹಿನ್ನೆಲೆಯಲ್ಲಿ ಕೇಸ್ ರಿಜಿಸ್ಟರ್ಡ್ ಮಾಡಿದ ಕಾರಣಕ್ಕಾಗಿಯೇ ಈ ಸಂದರ್ಭದಲ್ಲಿ ಪೋಲೀಸ್ ಅಧಿಕಾರಿ ನಾಗರಾಜ್‌ರವರನ್ನು ವರ್ಗಾವಣೆ ಮಾಡಿರುವುದನ್ನು ತೀವ್ರವಾಗಿ ಖಂಡಿಸಿ, ನಿಷ್ಠಾವಂತ ಅಧಿಕಾರಿಗಳನ್ನು ಸರ್ಕಾರ ಯಾವ ರೀತಿ ಪರಿಗಣಿಸುತ್ತದೆ ಎಂಬುದಕ್ಕೆ ಇದೊಂದು ನಿದರ್ಶನವಾಗಿದೆ. ಹಾಗೂ ಸಚಿವ ಇಬ್ರಾಹಿಂ ಮತ್ತು ಸಹಚರರ ಮೇಲೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸಿತು.

2. ಪ. ಬಂಗಾಳದಲ್ಲಿ ವಾಮರಂಗ ಪಡೆದ ಪ್ರಚಂಡ ಜಯಕ್ಕಾಗಿ ಜನತೆಯನ್ನು ಅಭಿನಂದಿಸಿತು. ಉಪಚುನಾವಣೆಯಿಂದ ಕಾಂಗೈಗೆ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಮಾತ್ರ ಉತ್ತರ ಕೊಡಬಲ್ಲವೆಂದು ಮತ್ತೊಮ್ಮೆ ತೋರಿಸಿಕೊಟ್ಟಿದೆ. ಆದ್ದರಿಂದ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಬೆಳೆಸಲು ಜನತೆ ಸಹಕಾರ ನೀಡುವಂತೆ ವಿನಂತಿಸಿದೆ.

3. ಕಾರ್ಮಿಕ ನಾಯಕ ಎನ್. ಡಿ. ಶಂಕರ್ ನಿಧನರಾದ ಬಗ್ಗೆ ಸಂತಾಪ ವ್ಯಕ್ತಪಡಿಸಲಾಯಿತು.

○

ನಿಧನ

ಮಂಗಳೂರಿನ ಜಪ್ಪಿನಮೊಗರು ಗ್ರಾಮ ತುದೋಳಿಗೆಯಲ್ಲಿ ವಾಸವಾಗಿರುವ ಕಾಂ. ಸೀತಮ್ಮನವರು ತಾ. 15-6-81 ರಂದು ಅಸ್ವಸ್ಥದಿಂದ ನಿಧನರಾಗಿದ್ದಾರೆ. ಶ್ರೀಮತಿಯವರಿಗೆ 46 ವರ್ಷ ಪ್ರಾಯವಾಗಿರುತ್ತದೆ. ಶ್ರೀಮತಿಯವರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭಿಮಾನಿಯೂ, ಐಕ್ಯರಂಗದ ಅಭಿಮಾನಿಯೂ ಆಗಿರುತ್ತಾರೆ. ಇವರಿಗೆ ಜಪ್ಪಿನಮೊಗರು ಪಾರ್ಟಿ ಶಾಖೆಯು ತನ್ನ ಸಂತಾಪ ಸೂಚಿಸಿದೆ.

●

ಆರ್ಥಿಕ ಸಮೀಕ್ಷೆ:

[ಕಳೆದ ಸಂಚಿಕೆಯಿಂದ ಮುಂದುವರೆದುದು]

ಬಡತನ ಮತ್ತು ಜನಸಂಖ್ಯೆ

ಆರ್. ಚಂದ್ರ

ಕಳೆದ ಸಂಚಿಕೆಯ ಸಮೀಕ್ಷೆಯಲ್ಲಿ ಜನಸಂಖ್ಯೆ ಹೆಚ್ಚಳವು ಬಡತನಕ್ಕೆ ಕಾರಣವಾಗಿರದೆ, ಬಡತನವೇ ಜನಸಂಖ್ಯೆ ಹೆಚ್ಚಳಕ್ಕೆ ಕಾರಣ ಎಂದು ಸವಿವರವಾಗಿ ತಿಳಿಸಿದ್ದಾಯಿತು. ಭಾರೀ ಪ್ರಮಾಣದಲ್ಲಿ ಬಡತನ, ನಿರುದ್ಯೋಗ, ಅನಕ್ಷರತೆ ಇರುವ ದೇಶದಲ್ಲಿ ಜನಸಂಖ್ಯಾ ನಿಯಂತ್ರಣವೂ ಹೇಗೆ ಪರಿಣಾಮಕಾರಿಯಾಗಲಾರದು ಎಂದು ನಮ್ಮ ದೇಶದ ಪ್ರತ್ಯಕ್ಷ ಅನುಭವದ ಹಿನ್ನೆಲೆಯಲ್ಲಿ ಪರಿಶೀಲಿಸೋಣ. 1981ರ ಜನಗಣತಿಯಲ್ಲಿ ತೋರಿಬಂದ ಕೆಲವು ವಿಷಯಗಳು ಈ ಸಮೀಕ್ಷೆಗೆ ಸಹಕಾರಿಯಾಗುವುವು.

ಜನಸಂಖ್ಯೆ, ಅಕ್ಷರತೆ

ಮೊದಲು, 1981ರ ಜನಗಣತಿಯಂತೆ ರಾಜ್ಯವಾರು ಜನಸಂಖ್ಯೆಯು, ಅಕ್ಷರತೆಯ ವಿವರಗಳನ್ನು ಪರಿಶೀಲಿಸೋಣ.

ರಾಜ್ಯಗಳು ಮತ್ತು 1971ರಲ್ಲಿನ ಜನಸಂಖ್ಯೆ (ಮಿಲಿಯಗಳಲ್ಲಿ)	1981ರಲ್ಲಿ ಜನಸಂಖ್ಯೆ (ಮಿಲಿಯಗಳಲ್ಲಿ)	ಒಟ್ಟು ಜನಸಂಖ್ಯೆಯ ಶೇಕಡಾಂಶ	1971-81ರಲ್ಲಿ ಜನಸಂಖ್ಯೆಯ ಶೇಕಡಾ ಹೆಚ್ಚಳ	1981ರಲ್ಲಿ ಅಕ್ಷರಸ್ಥರ ಶೇಕಡಾಂಶ
1. ಉ. ಪ್ರದೇಶ (88.34)	110.85	16.21	25.48	27.38
2. ಬಿಹಾರ (56.35)	69.82	10.21	24.00	26.01
3. ಮಹಾರಾಷ್ಟ್ರ (50.41)	62.69	9.17	24.26	47.37
4. ಪ. ಬಂಗಾಳ (44.31)	54.49	7.97	23.00	40.88
5. ಆಂಧ್ರಪ್ರದೇಶ (43.50)	53.40	7.80	22.74	29.94
6. ಮ. ಪ್ರದೇಶ (41.65)	52.13	7.62	25.20	27.82
7. ತಮಿಳುನಾಡು (41.20)	48.30	7.06	17.25	45.78
8. ಕರ್ನಾಟಕ (29.30)	37.04	5.42	26.42	38.41
9. ರಾಜಸ್ಥಾನ (25.77)	34.10	4.99	32.32	24.05
10. ಗುಜರಾತ್ (26.70)	33.96	4.97	27.20	43.75
11. ಒರಿಸ್ಸಾ (21.94)	26.27	3.84	20.00	34.12
12. ಕೇರಳ (21.35)	25.40	3.71	10.00	69.17
13. ಅಸ್ಸಾಂ (14.96)	19.90	2.91	33.00	—
14. ಪಂಜಾಬ್ (13.55)	16.67	2.44	23.00	40.74
15. ಹರಿಯಾಣ (10.04)	12.85	1.88	28.00	35.84
16. ಇತರರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು (18.00)	26.04	3.60	44.67	—
ಒಟ್ಟು (547.40)	683.81	100.00	24.75	36.17

1. 1971-81ರ ದಶಕದಲ್ಲಿ ದೇಶದ ಜನಸಂಖ್ಯಾ ಹೆಚ್ಚಳದ ದರವು ಶೇ. 24.75ರಷ್ಟಾಗಿದ್ದು, 1961-71ರ ದಶಕದಲ್ಲಿನ ಶೇ. 24.80ರ ದರಕ್ಕಿಂತ ಶೇ. 0.05ರಷ್ಟೇ ಇಳಿಮುಖವಾಗಿದೆ.

2. ಗೋವಾ ಹೊರತಾಗಿ ಹೆಚ್ಚಿನ ಕೇಂದ್ರಾಡಳಿತ ಪ್ರದೇಶಗಳಲ್ಲಿಯೂ, ಅಸ್ಸಾಂ, ರಾಜಸ್ಥಾನ, ಹರಿಯಾಣ, ಗುಜರಾತ್, ಕರ್ನಾಟಕ, ಉ.ಪ್ರದೇಶ ಮತ್ತು ಮ. ಪ್ರದೇಶ ರಾಜ್ಯಗಳಲ್ಲಿಯೂ ಕಳೆದ ದಶಕದಲ್ಲಿ ದೇಶದ ಸರಾಸರಿಗಿಂತಲೂ ಅಧಿಕ ವೇಗದಲ್ಲಿ ಜನಸಂಖ್ಯೆ ಹೆಚ್ಚಿತು.

3. ಮಹಾರಾಷ್ಟ್ರ, ಬಿಹಾರ, ಪ. ಬಂಗಾಳ, ಆಂಧ್ರಪ್ರದೇಶ ಮತ್ತು ಪಂಜಾಬ್ ರಾಜ್ಯಗಳಲ್ಲಿಯೂ ಜನಸಂಖ್ಯಾ ಹೆಚ್ಚಳದ ದರವು ದೇಶದ ಸರಾಸರಿಯ ಸಮೀಪವಾಗಿರುವುದನ್ನು ಗಮನಿಸಬಹುದು.

4. ಉ. ಪ್ರದೇಶ, ಮ. ಪ್ರದೇಶ ಮತ್ತು ಬಿಹಾರ ರಾಜ್ಯಗಳ ಒಟ್ಟು ಜನಸಂಖ್ಯೆಯು ದೇಶದ ಒಟ್ಟು ಜನಸಂಖ್ಯೆಯ ಮೂರನೇ ಒಂದಂಶಕ್ಕಿಂತಲೂ ಹೆಚ್ಚಿರುವುದು. ರಾಜಸ್ಥಾನವೂ ಸೇರಿದಂತೆ ಈ ನಾಲ್ಕು ರಾಜ್ಯಗಳ ಒಟ್ಟು ಜನಸಂಖ್ಯೆ ದೇಶದ ಒಟ್ಟು ಜನಸಂಖ್ಯೆಯ ಶೇ. 40ರಷ್ಟಾಗಿದೆ ಮತ್ತು ಜನಸಂಖ್ಯಾ ಹೆಚ್ಚಳದ ಸರಾಸರಿ ದರ ಶೇ. 27ರಷ್ಟಿದ್ದು ದೇಶದ ಸರಾಸರಿಗಿಂತ ಗಣನೀಯವಾಗಿ ಹೆಚ್ಚಾಗಿದೆ.

5. ಕೇರಳ, ತಮಿಳುನಾಡು ಮತ್ತು ಒರಿಸ್ಸಾ ರಾಜ್ಯಗಳಲ್ಲಿ ಜನಸಂಖ್ಯಾ ಹೆಚ್ಚಳ ದರಗಳು ದೇಶದ ಸರಾಸರಿಗಿಂತ ಬಹಳ ಕಡಿಮೆಯಾಗಿರುವುದನ್ನು ಗಮನಿಸಬಹುದು.

6. 1971ರಲ್ಲಿ ದೇಶದ ಜನಸಂಖ್ಯೆಯಲ್ಲಿ ಶೇ. 29.45ರಷ್ಟು ಅಕ್ಷರಸ್ಥರಿದ್ದರೆ, 1981ರಲ್ಲಿ ಶೇ. 36.17ರಷ್ಟೇ ಅಕ್ಷರಸ್ಥರಿರುವರು. ಹತ್ತು ವರ್ಷಗಳಲ್ಲಿ ಅಕ್ಷರಸ್ಥರ ಸಂಖ್ಯೆ 8.2 ಕೋಟಿ ಹೆಚ್ಚಿದರೂ, ಅನಕ್ಷರಸ್ಥರ ಸಂಖ್ಯೆಯೂ 4.8 ಕೋಟಿಯಷ್ಟು ಹೆಚ್ಚಾಗಿದೆ. 1981ರಲ್ಲಿ ಗಂಡಸರಲ್ಲಿ ಶೇ. 46.74ರಷ್ಟು ಅಕ್ಷರಸ್ಥರಿದ್ದರೆ, ಹೆಂಗಸರಲ್ಲಿ ಕೇವಲ ಶೇ. 24.88ರಷ್ಟು ಅಕ್ಷರಸ್ಥರಿರುವರು.

7. ಮಹಾನಗರಗಳಲ್ಲಿ ಮತ್ತು ಕೇರಳ, ಮಹಾರಾಷ್ಟ್ರ, ತಮಿಳುನಾಡು, ಗುಜರಾತ್, ಪ. ಬಂಗಾಳ, ಪಂಜಾಬ್ ರಾಜ್ಯಗಳ ಜನಸಂಖ್ಯೆಯಲ್ಲಿ ಅಕ್ಷರಸ್ಥರ ಶೇಕಡಾಂಶವು ದೇಶದ ಸರಾಸರಿಗಿಂತ ಗಣನೀಯವಾಗಿ ಹೆಚ್ಚಾಗಿರುವುದು. ಕರ್ನಾಟಕದಲ್ಲಿ ಅಕ್ಷರಸ್ಥರ ಶೇಕಡಾಂಶವು ದೇಶದ ಸರಾಸರಿಗಿಂತ ಸ್ವಲ್ಪ ಹೆಚ್ಚಾಗಿದ್ದರೆ, ಹರಿಯಾಣ ಮತ್ತು ಒರಿಸ್ಸಾ ರಾಜ್ಯಗಳಲ್ಲಿ ಅಕ್ಷರಸ್ಥರ ಶೇಕಡಾಂಶವು ದೇಶದ ಸರಾಸರಿಗೆ ತೀರಾ ಸಮೀಪವಾಗಿದೆ.

8. ರಾಜಸ್ಥಾನ, ಬಿಹಾರ, ಉ. ಪ್ರದೇಶ, ಮ. ಪ್ರದೇಶ ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿ ಅಕ್ಷರಸ್ಥರ ಶೇಕಡಾಂಶವು ದೇಶದ ಸರಾಸರಿಗಿಂತ ತೀರಾ ಕಡಿಮೆಯಾಗಿರುವುದನ್ನು ಗಮನಿಸಬಹುದು. ಈ ರಾಜ್ಯಗಳ ಒಟ್ಟು ಜನಸಂಖ್ಯೆಯು ದೇಶದ ಒಟ್ಟು ಜನಸಂಖ್ಯೆಯ ಶೇ. 47ರಷ್ಟಿದ್ದು, ಅವರಲ್ಲಿ ಅಕ್ಷರಸ್ಥರ ಶೇಕಡಾಂಶ ಸರಾಸರಿ 27ರಷ್ಟೇ ಆಗಿರುವುದನ್ನೂ ಗಮನಿಸಬೇಕು. ಈ ರಾಜ್ಯಗಳ ಜನಸಂಖ್ಯಾ ಹೆಚ್ಚಳದ ದರವೂ ಸರಾಸರಿ ಶೇ. 26ರಷ್ಟಿದ್ದು, ದೇಶದ ಸರಾಸರಿಗಿಂತ ಬಹಳ ಏರಿಕೆಯಲ್ಲಿದೆ.

"ಮೇಲಿನ ವಿಶ್ಲೇಷಣೆಗಳಿಂದ ಸ್ಥೂಲವಾಗಿ ತಿಳಿದುಬರುವುದೇನೆಂದರೆ, ಅಕ್ಷರಸ್ಥರ ಶೇಕಡಾಂಶ ಹೆಚ್ಚಿರುವ ಜನಸಂಖ್ಯೆಯ ರಾಜ್ಯಗಳಲ್ಲಿ ಜನಸಂಖ್ಯಾ ಹೆಚ್ಚಳದ ದರವು ಇಳಿಮುಖವಾಗಿರುವುದು ಮತ್ತು ಅನಕ್ಷರಸ್ಥರ ಶೇಕಡಾಂಶ ಹೆಚ್ಚಿರುವ ಜನಸಂಖ್ಯೆಯ ರಾಜ್ಯಗಳಲ್ಲಿ ಜನಸಂಖ್ಯಾ ಹೆಚ್ಚಳದ ದರಗಳು ಏರಿಕೆಯಲ್ಲಿರುವುವು. (ಇವುಗಳಿಗೆ ಕೆಲವು ಅಪವಾದಗಳಿರಬಹುದು). ಕೇರಳ ಮತ್ತು ರಾಜಸ್ಥಾನ ರಾಜ್ಯಗಳು ಇವೆರಡು ಪರಿಸ್ಥಿತಿಗೆ ಉತ್ತಮ ನಿದರ್ಶನಗಳು"

ಕೇರಳ ಮತ್ತು ರಾಜಸ್ಥಾನ:

ಕೇರಳದಲ್ಲಿ ಜನಸಂಖ್ಯಾ ಹೆಚ್ಚಳದ ದರವು ಕಳೆದ ದಶಕದಲ್ಲಿ ಶೇ. 10ರಷ್ಟೇ ಆಗಿದ್ದು, ದೇಶದಲ್ಲಿಯೇ ಕನಿಷ್ಟವಾಗಿದೆ. ರಷ್ಯಾ, ಅಮೇರಿಕ ಮುಂತಾದ ಅಭಿವೃದ್ಧಿ ಹೊಂದಿದ ದೇಶಗಳ ಜನಸಂಖ್ಯಾ ಹೆಚ್ಚಳದ ಕನಿಷ್ಟ ದರಕ್ಕೆ ಕೇರಳದ ಜನಸಂಖ್ಯಾ ಹೆಚ್ಚಳದ ದರವು ಇಳಿದಿದೆ. ಇದೊಂದು ಮಹತ್ವದ ಸಾಧನೆ. ಯೋಜನಾ ಆಯೋಗವು ದೇಶದ ಜನಸಂಖ್ಯಾ ಹೆಚ್ಚಳದ ದರವು ಈ ಶತಮಾನದ ಅಂತ್ಯದಲ್ಲಾದರೂ ಶೇ. 10ಕ್ಕೆ ಇಳಿಸಬೇಕೆಂದಿರುವಾಗ, ಕೇರಳದಲ್ಲಿ 20 ವರ್ಷಗಳ ಮುಂಚಿತವಾಗಿಯೇ ಈ ಕನಿಷ್ಟ ದರವನ್ನು ಸಾಧಿಸಲಾಗಿದೆ. ಚೀನಾದ ಜನಸಂಖ್ಯಾ ಹೆಚ್ಚಳದ ದರಕ್ಕಿಂತಲೂ ಕೇರಳದ ಜನಸಂಖ್ಯಾ ಹೆಚ್ಚಳದ ದರವು ಕಡಿಮೆಯಾಗಿದೆ. ಆದರೆ, ಜನಸಾಂದ್ರತೆಯಲ್ಲಿ ನಗರಪ್ರದೇಶಗಳನ್ನು ಬಿಟ್ಟರೆ, ಕೇರಳವು ದೇಶದಲ್ಲಿಯೇ ಅತ್ಯಂತ ಜನಸಾಂದ್ರತೆವುಳ್ಳ ರಾಜ್ಯವಾಗಿದೆ. ಒಂದು ಚದರ ಕಿ. ಮೀ.ಗೆ ದೇಶದ ಸರಾಸರಿ ಜನಸಾಂದ್ರತೆಯು 1981ರಲ್ಲಿ 220 ಆಗಿದ್ದರೆ, ಕೇರಳದ ಜನಸಾಂದ್ರತೆಯು 654 ಆಗಿದೆ. (ಪ. ಬಂಗಾಳದ ಜನಸಾಂದ್ರತೆಯು 614, ಬಿಹಾರ, ಉ. ಪ್ರದೇಶ, ತಮಿಳುನಾಡು, ಪಂಜಾಬ್ ರಾಜ್ಯಗಳ ಜನಸಾಂದ್ರತೆ 300ಕ್ಕಿಂತ ಹೆಚ್ಚಾಗಿದೆ.)

ಜೊತೆಗೇ, ಕೇರಳದ ಜನಸಂಖ್ಯೆಯಲ್ಲಿ ಅಕ್ಷರಸ್ಥರ ಶೇಕಡಾಂಶವು 69.17ರಷ್ಟಾಗಿದೆ. ಆ ರಾಜ್ಯದ ಗಂಡಸರಲ್ಲಿ ಅಕ್ಷರಸ್ಥರ ಶೇಕಡಾಂಶ 73.86 ಮತ್ತು ಹೆಂಗಸರಲ್ಲಿ ಅಕ್ಷರಸ್ಥರ ಶೇಕಡಾಂಶ 64.48. ಇದು ದೇಶದಲ್ಲಿಯೇ ಅತ್ಯಂತ ಹೆಚ್ಚು. ಅಭಿವೃದ್ಧಿ ಹೊಂದುತ್ತಿರುವ ಯಾವ ದೇಶಗಳಿಗೆ ಹೋಲಿಸಿದರೂ (ಸಮಾಜವಾದಿ ದೇಶಗಳಾದ ಚೀನಾ, ಕ್ಯೂಬಾ, ವಿಯಟ್ನಾಂ ಹೊರತು) ಕೇರಳದ ಸಾಕ್ಷರತೆಯು ಅತ್ಯಂತ ಗರಿಷ್ಟ ಮಟ್ಟದಲ್ಲಿದೆ. ಮುಂಬಯಿ (ಸಾಕ್ಷರತೆ : ಶೇ. 68.16), ದೆಹಲಿ (ಸಾಕ್ಷರತೆ : ಶೇ. 61.06) ಕಲ್ಕತ್ತಾ, ಮದ್ರಾಸ್ ಮೊದಲಾದ ಮಹಾ ನಗರಗಳ ಜನಸಂಖ್ಯೆಯ ಅಕ್ಷರಸ್ಥರ ಶೇಕಡಾಂಶಕ್ಕಿಂತಲೂ ಕೇರಳ ರಾಜ್ಯದ ಅಕ್ಷರಸ್ಥರ ಶೇಕಡಾಂಶ ಹೆಚ್ಚಾಗಿರುವುದನ್ನು ಗಮನಿಸಬೇಕು.

ಕೇರಳದ ತದ್ವಿರುದ್ಧವಾಗಿ, ರಾಜಸ್ಥಾನದಲ್ಲಿ ಅಕ್ಷರಸ್ಥರ ಶೇಕಡಾಂಶವು 24.05ರಷ್ಟೇ ಆಗಿದ್ದು, ದೇಶದಲ್ಲಿಯೇ ಅತ್ಯಂತ ಕನಿಷ್ಟವಾಗಿದೆ. ಆ ರಾಜ್ಯದಲ್ಲಿ ಜನಸಂಖ್ಯಾ ಹೆಚ್ಚಳದ ದರವು ಕಳೆದ ದಶಕದಲ್ಲಿ ಶೇ. 32.32 ರಷ್ಟಾಗಿದ್ದು ದೇಶದಲ್ಲಿಯೇ ಗರಿಷ್ಟ ದರವಾಗಿದೆ. (ಅಸ್ಸಾಂ ಹೊರತು-ಅಲ್ಲಿ ನೆರೆ ದೇಶದಿಂದ ಮತ್ತು ನೆರೆರಾಜ್ಯಗಳಿಂದ ವಲಸೆ ಬಂದವರಿದ್ದಾರೆ)

ಕೇರಳದ ವಿಶಿಷ್ಟ ಅನುಭವಗಳು :

ಕೇರಳದಲ್ಲಿ ಜನಸಾಂದ್ರತೆ ಹೆಚ್ಚಿದ್ದು ಸಾಕ್ಷರತೆ ಗರಿಷ್ಟವಾಗಿದ್ದು ಜನಸಂಖ್ಯಾ ಹೆಚ್ಚಳದ ದರವು ಕನಿಷ್ಟವಾಗಿರಲು ಕಾರಣಗಳೇನು ?

1. ಕೇರಳದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿಯೂ, ಸ್ವಾತಂತ್ರ್ಯೋತ್ತರದಲ್ಲಿಯೂ ಜಾತೀಯತೆ, ಬಹುಪತ್ನಿತ್ವ ಅವಿಭಾಜ್ಯ ಕುಟುಂಬ, ವರದಕ್ಷಿಣೆ, ಜೀತ ಇತ್ಯಾದಿ ಪಾಳೆಯಗಾರಿ ಪದ್ಧತಿಗಳ ವಿರುದ್ಧವಾಗಿ, ಸಮಾಜದಲ್ಲಿ ಸ್ತ್ರೀಯರ ಸಮಾನ ಸ್ಥಾನ-ಮಾನಗಳಿಗಾಗಿ, ಆಧುನಿಕ ಆಚಾರವಿಚಾರಗಳಿಗಾಗಿ, ಭೂಮಾಲಕರು ಹಾಗೂ ಬಂಡವಾಳಶಾಹಿಗಳು ಮತ್ತು ವಿದೇಶಿಯರು ನಡೆಸುವ ಸುಲಿಗೆ ಶೋಷಣೆಗಳ ವಿರುದ್ಧವಾಗಿ, ಸಾಮಾಜಿಕ ನ್ಯಾಯಕ್ಕಾಗಿ, ಸಂಘಟನಾ ಸ್ವಾತಂತ್ರ್ಯಕ್ಕಾಗಿ ವ್ಯಾಪಕವಾಗಿ ದೀರ್ಘ ಕಾಲದಿಂದ ಪ್ರಜಾಸತ್ತಾತ್ಮಕ ಹೋರಾಟಗಳು ನಿರಂತರವಾಗಿ ನಡೆದು ಬಂದುದರಿಂದ ಈ ರಾಜ್ಯದ ಜನರ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಪ್ರಜ್ಞೆಯು ಬಹಳಷ್ಟು ಅಭಿವೃದ್ಧಿ ಹೊಂದಿದೆ. ಪ್ರಜಾಸತ್ತಾತ್ಮಕ ಹೋರಾಟದೊಂದಿಗೇ ಸಾಕ್ಷರತೆಯೂ, ಶಿಕ್ಷಣವೂ ಬೆಳೆದು ಬಂದಿತು.

2. ಈ ರಾಜ್ಯದಲ್ಲಿ ರೈತ-ಕಾರ್ಮಿಕರ ಸಂಘಟಿತ ಹೋರಾಟಗಳಿಂದಾಗಿ, ಎಡ-ಪ್ರಜಾಪ್ರಭುತ್ವ ಶಕ್ತಿಗಳು ಪ್ರಬಲವಾಗುತ್ತಾ ಬಂದುದರಿಂದ, ಅವುಗಳು ಅಧಿಕಾರದಲ್ಲಿರುವಾಗ ಕ್ರಾಂತಿಕಾರಕ ಭೂಸುಧಾರಣಾ ಮಸೂದೆ, ಕನಿಷ್ಟ ವೇತನ ಮಸೂದೆ, ಇತ್ಯಾದಿಗಳನ್ನು ಜಾರಿಗೆ ತಂದು, ಅವುಗಳು ವಿರೋಧಪಕ್ಷಗಳಾಗಿದ್ದಾಗ ಆ ಮಸೂದೆಗಳನ್ನು ಪರಿಣಾಮಕಾರಿಯಾಗಿ ಪಂಚಾಯತ್ ಮಟ್ಟದಿಂದ ಮೇಲ್ಮಟ್ಟದವರೆಗೆ ಕಾರ್ಯಗತಗೊಳಿಸಿದುದರಿಂದಲೂ ಜನಸಾಮಾನ್ಯರಿಗೆ ಸಾಮಾಜಿಕ ನ್ಯಾಯದೊರೆಯುವಂತಾಯಿತು. ಭೂಸಂಬಂಧದಲ್ಲಿ ಗಣನೀಯ ಬದಲಾವಣೆ, ಭೂರಹಿತ ಕೃಷಿಕಾರ್ಮಿಕರಿಗೆ

[9ನೇ ಪುಟ ನೋಡಿ]

ಮಿಲಿಯಗಟ್ಟಲೆ ಕೈಗಳು ಒಂದುಗೂಡಿದರೆ...

ರಾಜ್ಯದ ಆಡಳಿತೆಯಲ್ಲಿ ಗ್ರಾಮಾಂತರ ಪ್ರದೇಶದ ಬಡಜನತೆಯು ಸಕ್ರಿಯ ಸಹಭಾಗಿತ್ವವಿರಬೇಕೆಂದು ಎಡರಂಗ ಸರ್ಕಾರ ದೃಢವಾಗಿ ನಂಬಿದೆ. ಪ್ರಜಾಪ್ರಭುತ್ವದ ಯಶಸ್ಸಿಗೆ ಆಡಳಿತ ಹಾಗೂ ಆರ್ಥಿಕ ಅಧಿಕಾರದ ವಿಕೇಂದ್ರೀಕರಣ ಅಗತ್ಯವೆಂದು ಅದು ಪರಿಗಣಿಸಿದೆ.

ಮೂರು ಹಂತಗಳಿರುವ ಪಂಚಾಯತ್‌ಗಳಲ್ಲಿನ ಒಟ್ಟು 50,000 ಪ್ರತಿನಿಧಿಗಳಲ್ಲಿ ಹೆಚ್ಚಿನವರು ಬಡದುಡಿಮೆಗಾರರು. ಅವರು ಸಮಾಜದ ಬೇರೆಬೇರೆ ಸ್ತರಗಳಿಗೆ, ವಿವಿಧ ಧರ್ಮಗಳಿಗೆ ಸೇರಿದ್ದಾರೆ.

ಕಳೆದ ಮೂರು ವರ್ಷಗಳಲ್ಲಿ ಹೊಸಗ್ರಾಮೀಣ ಬಂಗಾಲವನ್ನು ಕಟ್ಟುವ ಹೊಣೆಗಾರಿಕೆಯನ್ನು ಈ ಬಡ ಶ್ರಮಿಕರ ಕೈಗೆ ವಹಿಸಲಾಗಿದೆ. ಭೂಹೀನ ಕೃಷಿಕರಿಗೆ ಮನೆಗಳನ್ನೂ, ಗ್ರಾಮಾಂತರ ಮಕ್ಕಳಿಗೆ ಶಾಲೆಗಳನ್ನೂ, ಅಸ್ವಸ್ಥರಿಗಾಗಿ ಹೋಮಿಯೋಪತಿಕ್ ಆಸ್ಪತ್ರೆಗಳನ್ನೂ ಅವರೇ ನಿರ್ಮಿಸುತ್ತಿದ್ದಾರೆ; ಹಳ್ಳಿಯ ರಸ್ತೆ, ಸೇತುವೆ ಮತ್ತು ಮೋರಿಗಳನ್ನು ದುರಸ್ತುಗೊಳಿಸುತ್ತಾರೆ; ಹೊಸದಾಗಿ ಕಟ್ಟುತ್ತಾರೆ. ಕೆರೆಗಳನ್ನು ಸರಿಪಡಿಸುವುದು, ಮೀನು ಸಾಕಣೆ, ಬೀಜ ಮತ್ತು ಸಾಲಗಳ ವಿತರಣೆ, ಭತ್ತ ಹಾಗೂ ಅಕ್ಕಿ ಸಂಗ್ರಹಣೆ, ತೂತು ಬಾವಿಗಳನ್ನು ತೋಡುವುದು, ಗುಡಿಕೈಗಾರಿಕೆಗಳಿಗೆ ನೆರವು ನೀಡುವುದು, ಬರ್ಗಾದಾರರ ಹೆಸರುಗಳನ್ನು ದಾಖಲೆ ಮಾಡಿಕೊಳ್ಳುವುದು ಅಥವಾ ಇನ್ನಾವುದೇ ಕೆಲಸವಿರಲಿ—ಅದಕ್ಕೆ ಪಂಚಾಯತುಗಳ ಸಹಕಾರ ಬೇಕೇಬೇಕು. ಇನ್ನೂ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಈ ಸಹಕಾರ ಅನಿವಾರ್ಯ.

ಗ್ರಾಮಾಂತರ ಪ್ರದೇಶದಲ್ಲಿನ ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸುವ ಮೂಲಕ ಪಂಚಾಯತುಗಳು ಹೊಸ ಮೇಲ್ಪಂಕ್ತಿಯೊಂದನ್ನು ಹಾಕಿಕೊಟ್ಟಿವೆ. ಈ ಎಲ್ಲ ಯೋಜನೆಗಳನ್ನೂ, ಕಾರ್ಯಕ್ರಮಗಳನ್ನೂ ಕಾರ್ಯಗತಗೊಳಿಸಲು ಪಂಚಾಯತುಗಳು ಸಂಪೂರ್ಣ ಸ್ವತಂತ್ರರು. ಇವುಗಳಿಗಾಗಿ ಈವರೆಗೆ 122 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ. ಇದು ನಾವು ಪಡೆದಿರುವ ಆಹಾರಧಾನ್ಯದ ಕ್ರಯ ಮತ್ತು ಗ್ರಾಮಾಂತರ ಅಭಿವೃದ್ಧಿ ಯೋಜನೆಗಾಗಿ ನಿಗದಿಪಡಿಸಿರುವ ಖರ್ಚನ್ನು ಒಳಗೊಂಡಿಲ್ಲ. ಹೀಗೆ ನಿಗದಿಪಡಿಸಲಾದ ಮೊತ್ತದ ಶೇ. 60 ರಷ್ಟನ್ನು ಈಗಾಗಲೇ ಖರ್ಚು ಮಾಡಲಾಗಿದೆ.

ಪಂಚಾಯತುಗಳಿಗೆ ತಮ್ಮದೇ ಆದ ನಿಧಿಯಿದೆ. ಅಗತ್ಯವಿದ್ದರೆ ಅವರು ತೆರಿಗೆಗಳನ್ನೂ ವಿಧಿಸಬಹುದು. ಈ ಉಪಕ್ರಮದಿಂದ ಈಗಾಗಲೇ 1½ ಕೋಟಿ ರೂಪಾಯಿಗೂ ಮಿಕ್ಕಿ ಸಂಗ್ರಹಿಸಲಾಗಿದೆ.

ಪಂಚಾಯತುಗಳ ಕಾರ್ಯನಿಷ್ಠೆ ಮತ್ತು ಉತ್ಸಾಹಗಳಿಂದಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲೆಲ್ಲೂ ಚಟುವಟಿಕೆ ಕಾಣಿಸುತ್ತಿದೆ.

ಹೊಸ ಹಳ್ಳಿಗಳು ಉದಿಸುತ್ತಿವೆ. ಹೊಸ ಜನರು ತಮ್ಮ ಬದುಕಿನ ಚುಕ್ಕಾಣಿ ಹಿಡಿದಿದ್ದಾರೆ. ಅವರು ಸ್ವಾವಲಂಬಿಗಳು ಆತ್ಮಾಭಿಮಾನವುಳ್ಳವರು.

ಪಶ್ಚಿಮ ಬಂಗಾಳ ಸರ್ಕಾರ



ಆರ್ಥಿಕ ಸಮೀಕ್ಷೆ:

[7ನೇ ಪುಟದಿಂದ]

ಹೆಚ್ಚುವರಿ ಭೂಮಿಯ ಮರು ವಿತರಣೆ, ಸಣ್ಣ ಹಿಡುವಳಿದಾರರಿಗೆ ಹೆಚ್ಚಿನ ಸಾಲ, ಸಹಾಯ, ಕೃಷಿ-ಕಾರ್ಮಿಕರೂ ಸೇರಿದಂತೆ ಎಲ್ಲಾ ಕಾರ್ಮಿಕರಿಗೂ ಕನಿಷ್ಟ ವೇತನ ಕಟ್ಟುನಿಟ್ಟಿನಲ್ಲಿ ಜಾರಿ, ಜೀವನಾವಶ್ಯಕ ವಸ್ತುಗಳ ಸಮರ್ಥ ಸಾರ್ವಜನಿಕ ವಿತರಣೆ ಮತ್ತು ವಸತಿ, ಆರೋಗ್ಯ, ಶಿಕ್ಷಣ ಮುಂತಾದ ಸಾರ್ವಜನಿಕ ಸೌಲಭ್ಯಗಳು ಹೆಚ್ಚು ನ್ಯಾಯಯುತವಾಗಿ ಶ್ರೀ ಸಾಮಾನ್ಯನಿಗೂ ಸಿಗುವಂತೆ ಏರ್ಪಾಡು, ಇತ್ಯಾದಿ ಕ್ರಮಗಳಿಂದ ಅಸಮಾನತೆಯು ಸಾಕಷ್ಟು ಕಡಿಮೆಯಾಗಿ ಸಾಮಾಜಿಕ ನ್ಯಾಯ ಸರ್ವಸಾಮಾನ್ಯವಾಗಿ ಎಲ್ಲರಿಗೂ ದೊರೆಯುವಂತಾಯಿತು.

3. ಸಾರ್ವಜನಿಕ ಸೇವಾ ಸೌಲಭ್ಯಗಳು ಹೆಚ್ಚು ಹೆಚ್ಚು ನ್ಯಾಯಯುತವಾಗಿ ದೊರಕತೊಡಗಿದುದರಿಂದ, ಮಕ್ಕಳ, ಗರ್ಭಿಣಿಯರ, ಬಾಳಂತಿಯರ ಸಾವಿನ ಸಂಖ್ಯೆ ಇಳಿಮುಖವಾಯಿತು. ಜನರ ಆರೋಗ್ಯ, ಶಿಕ್ಷಣ ಹೆಚ್ಚಿದಂತೆ ಜನಸಂಖ್ಯಾ ಹೆಚ್ಚಳದ ದರವೂ ಇಳಿಮುಖವಾಯಿತು.

4. ಕೇರಳದಲ್ಲಿ ದೀರ್ಘಕಾಲದ ಎಡ-ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯ ಹೋರಾಟಗಳಿಂದಾಗಿ ಮಹಿಳೆಯರಿಗೆ ಸಮಾಜದಲ್ಲಿ ಹೆಚ್ಚಿನ ಸ್ಥಾನಮಾನಗಳು ದೊರಕಿದವು. ಅವರಲ್ಲಿಯೂ ಸುಶಿಕ್ಷಿತರ ಸಂಖ್ಯೆ ಹೆಚ್ಚಿತು. ಮಹಿಳೆಯರ ಮದುವೆಯ ಸರಾಸರಿ ಪ್ರಾಯ 21ಕ್ಕೇರಿತು. ಅತ್ಯಂತ ಹಿಂದುಳಿದ ರಾಜಸ್ಥಾನದಲ್ಲಿ ಮಹಿಳೆಯರ ಮದುವೆಯ ಸರಾಸರಿ ಪ್ರಾಯ 15-16ವರ್ಷಗಳ ಒಳಗೇ ಇದೆ. ಬಾಲ್ಯವಿವಾಹ ಪದ್ಧತಿ ರಾಜಸ್ಥಾನ ಮೊದಲಾದ ಹಿಂದುಳಿದ ರಾಜ್ಯಗಳಲ್ಲಿ ಇನ್ನೂ ಜಾರಿಯಲ್ಲಿದೆ. ರಾಜಸ್ಥಾನದ ಮಂತ್ರಿಯೊಬ್ಬರು ಇತ್ತೀಚೆಗೆ ಅಪ್ರಾಯಸ್ಥ ಹುಡುಗಿಯೊಬ್ಬಳನ್ನು ಕಾನೂನಿಗೆ ವಿರುದ್ಧವಾಗಿ ಮದುವೆಯಾದ ಪ್ರಕರಣ ಒಂದು ವರದಿಯಾಗಿದೆ! ಕೇರಳದಲ್ಲಿ ಮಹಿಳೆಯರು ಬಹುಸಂಖ್ಯೆಯಲ್ಲಿ ಹೈಸ್ಕೂಲು ಹಾಗೂ ಹೆಚ್ಚಿನ ಶಿಕ್ಷಣ ಪಡೆಯುತ್ತಿರುವುದರಿಂದ, ಪುರುಷರಂತೆಯೇ ಮಹಿಳೆಯರೂ ಒಂದಲ್ಲ ಒಂದು ಉದ್ಯೋಗದಲ್ಲಿ ನಿರತರಾಗುತ್ತಿರುವುದರಿಂದ, ಅವರ ಮದುವೆಯ ಸರಾಸರಿ ಪ್ರಾಯವೂ ಹೆಚ್ಚುತ್ತಿದೆ. ಪರಿಣಾಮವಾಗಿ, ಚಿಕ್ಕ ಸಂಸಾರದ ಉದ್ದೇಶವುಳ್ಳ ಕುಟುಂಬ ಯೋಜನೆಯ ಪ್ರಯೋಜನಗಳು, ಪ್ರಯೋಗಗಳು ಅವರಿಗೆ ಚೆನ್ನಾಗಿ ಮನದಟ್ಟಾಗುತ್ತಿದೆ. ಕಾರಣ, ಜನಸಂಖ್ಯಾ ಹೆಚ್ಚಳದ ದರ ಭರದಿಂದ ಇಳಿಮುಖವಾಗುತ್ತಿದೆ.

5. ಕೇರಳದಲ್ಲಿ ಪ್ರತಿ 1000 ಗಂಡಸರಿಗೆ 1034 ಹೆಂಗಸರಿರುವುದು 1981ರ ಜನಗಣತಿಯಲ್ಲಿ ಕಂಡುಬಂದಿದೆ. ಆದರೆ, ದೇಶದಲ್ಲಿ ಸರಾಸರಿ 1000 ಗಂಡಸರಿಗೆ ಕೇವಲ 935ರಷ್ಟೇ ಹೆಂಗಸರಿದ್ದಾರೆ. ಈ ಶತಮಾನದ ಪ್ರಾರಂಭದಲ್ಲಿ ದೇಶದಲ್ಲಿ 1000 ಗಂಡಸರಿಗೆ 972ರಷ್ಟು ಹೆಂಗಸರಿದ್ದರು. 80ವರ್ಷಗಳಿಂದ ದೇಶದಲ್ಲಿ ಜನಸಂಖ್ಯೆಯಲ್ಲಿ ಹೆಂಗಸರ ಪ್ರಮಾಣ ಕಡಿಮೆಯಾಗುತ್ತಾ ಬಂದಿರುವುದನ್ನು ಗಮನಿಸಬೇಕು. 1981ರಲ್ಲಿ ಪ್ರತಿ 1000 ಗಂಡಸರಿಗೆ ಈ ಕೆಳಗಿನ ಕೇಂದ್ರಾಡಳಿತ ಪ್ರದೇಶಗಳಲ್ಲಿ ಮತ್ತು ರಾಜ್ಯಗಳಲ್ಲಿ ಹೆಂಗಸರ ಸಂಖ್ಯೆ ಕಡಿಮೆ ಇರುವುದನ್ನು ಗಮನಿಸಬೇಕು. ಚಂಡೀಘರ್ : 770, ದೆಹಲಿ : 810, ಹರಿಯಾಣ : 877, ಪಂಜಾಬ್ ಮತ್ತು ಉ. ಪ್ರದೇಶ : 886, ಪ.ಬಂಗಾಳ : 911, ರಾಜಸ್ಥಾನ : 921, ಮಹಾರಾಷ್ಟ್ರ : 939, ಮ.ಪ್ರದೇಶ : 941, ಬಿಹಾರ : 947. ಗಂಡಸರಿಗಿಂತ ಹೆಂಗಸರ ಸಂಖ್ಯೆ ಕಡಿಮೆ ಇರಲು ಹಲವಾರು ಕಾರಣಗಳಿರಬಹುದು. ಮುಖ್ಯವಾಗಿ ಕೆಲವು ಸಾಮಾಜಿಕ, ಆರ್ಥಿಕ ಕಾರಣಗಳನ್ನು ಗುರುತಿಸಬಹುದು.

ನಮ್ಮ ಗೊಡ್ಡು ಸಂಪ್ರದಾಯದಂತೆ ಹೆಣ್ಣು ಮಕ್ಕಳು ಮನೆಗೆ ಭಾರವೆಂದೂ ಅವರಿಗಿಂತ ಗಂಡು ಮಕ್ಕಳೇ ಬೇಕೆಂಬ ಬಯಕೆಯೂ ಹೆಣ್ಣು ಮಕ್ಕಳ ಆರೋಗ್ಯ, ಶಿಕ್ಷಣ, ಉದ್ಯೋಗದ ಕುರಿತಾಗಿ ಅಲಕ್ಷ್ಯಕ್ಕೆ ಕಾರಣವಾಗುವುದು. ಪುರುಷ ಪ್ರಧಾನ ಕುಟುಂಬ ಪದ್ಧತಿಯಲ್ಲಿ, ಮುಖ್ಯವಾಗಿ ಅವಿಭಾಜ್ಯ ಕುಟುಂಬದಲ್ಲಿ ಹೆಣ್ಣು ಮಕ್ಕಳು ಜೀತದಾಳುಗಳಂತಿರಬೇಕಾಗುವುದು. ರಾಜಸ್ಥಾನ, ಉ.ಪ್ರದೇಶ, ಬಿಹಾರ, ಮ. ಪ್ರದೇಶ ಮುಂತಾದ ಹಿಂದುಳಿದ ಕಡೆಗಳಲ್ಲಿ ಹೆಣ್ಣು ಮಕ್ಕಳನ್ನು ವ್ಯಭಿಚಾರಕ್ಕಿಳಿಸುವುದು, ಅವರ ಮೇಲೆ ದೌರ್ಜನ್ಯ ನಡೆಸುವುದು, ಅವರನ್ನು ಕೊಲ್ಲುವುದು, ಸುಲಿಗೆ ಮಾಡುವುದು, ಅವರು ಆತ್ಮಹತ್ಯೆ ಮಾಡಿಕೊಳ್ಳುವುದು, ಇತ್ಯಾದಿ ವಿದ್ಯಮಾನಗಳು ಹೆಚ್ಚುತ್ತಿವೆ. ಮುಖ್ಯವಾಗಿ ಜನಸಂಖ್ಯೆಯ ಅರ್ಧದಷ್ಟಿರುವ ಹೆಂಗಸರು ದೇಶದ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸುಸಂಘಟಿತರಾಗಿ ಸಕ್ರಿಯ ಪಾತ್ರವಹಿಸಲು ಅನುಕೂಲತೆಗಳಿಲ್ಲ. ಅಷ್ಟರಮಟ್ಟಿಗೆ ನಮ್ಮ ದೇಶದ ಪ್ರಜಾಸತ್ತೆ ಪ್ರಬುದ್ಧವಾಗಿಲ್ಲ. ಪರಿಣಾಮವಾಗಿ ಹೆಂಗಸರ ಸಂಖ್ಯೆ ಕಡಿಮೆಯಾಗುತ್ತಿದೆ. ಅವರ ಆದಾಯ, ಆರೋಗ್ಯ ಶಿಕ್ಷಣ ಮಟ್ಟಗಳು ಕೆಳಮಟ್ಟದಲ್ಲಿರುವುದರಿಂದ ಜನಸಂಖ್ಯಾ ನಿಯಂತ್ರಣದ ಪ್ರಯೋಗಗಳು, ಉದ್ದೇಶಗಳು ಅವರಿಗಿನ್ನೂ ತಲುಪಲಿಲ್ಲ.

ಕೇರಳದಲ್ಲಿ, ಮೊದಲೇ ಹೇಳಿದಂತೆ, ಹೆಂಗಸರ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಸ್ಥಾನಮಾನಗಳು ದೇಶದ ಇತರೆಡೆಗಳಿಗಿಂತ ಉತ್ತಮವಾಗಿರುವುದರಿಂದ ಅವರ ಸಂಖ್ಯೆ ಗಂಡಸರ ಸಂಖ್ಯೆಗೂ ಮೀರಿದೆ. ಪರಿಣಾಮವಾಗಿ, ಜನಸಂಖ್ಯಾ ನಿಯಂತ್ರಣದ ಪ್ರಯೋಗಗಳೂ, ಉದ್ದೇಶಗಳೂ ಅವರಿಗೆ ತಲುಪಿದೆ. ಆದುದರಿಂದಲೇ ಅಲ್ಲಿ ಜನಸಂಖ್ಯಾ ಹೆಚ್ಚಳದ ದರವು ಬಹಳ ಇಳಿಮುಖವಾಗುತ್ತಿದೆ.

ಸಮಗ್ರ ಸುಧಾರಣೆ

ಬಡತನ, ನಿರುದ್ಯೋಗದಿಂದಾಗಿ ಅನಕ್ಷರತೆ, ಅನಾರೋಗ್ಯ, ಅಸಮಾನತೆ, ಜನಸಂಖ್ಯಾ ಹೆಚ್ಚಳ, ಪುನಃ ಬಡತನ, ನಿರುದ್ಯೋಗ ಸಮಸ್ಯೆಗಳು. ಇದೊಂದು ವಿಷವರ್ತುಲ. ಇದನ್ನು ಭೇದಿಸಲು, ಬಡತನ ನಿವಾರಿಸಲು ಆರ್ಥಿಕ ಅಭಿವೃದ್ಧಿಗೆ, ಉತ್ಪಾದನೆ ಹೆಚ್ಚಿ ಸಾಮಾಜಿಕ ನ್ಯಾಯ ಸಿಗಲು, ಮೂಲಭೂತವಾದ ಸಮಗ್ರ ಸುಧಾರಣೆಗಳಾಗಬೇಕು. ಇದು ಭೂಮಾಲಕ-ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಲ್ಲಿನ ಇಂದಿರಾಗಾಂಧಿಯ ಆಳ್ವಿಕೆಯಿಂದ ಅಸಾಧ್ಯ. ಉತ್ಪಾದನೆಯ ಸಾಧನ ವಿಧಾನಗಳನ್ನು ಸಾಮಾಜಿಕ ಸ್ವಾಮ್ಯಕ್ಕೆ ಒಳಪಡಿಸಿ, ಪ್ರತಿಯೊಬ್ಬನಿಗೂ ಉದ್ಯೋಗಾವಕಾಶ ಒದಗಿಸಿ, ವಿತರಣೆಯಲ್ಲಿ ಸಾಮಾಜಿಕ ನ್ಯಾಯ ದೊರಕಿಸಿಕೊಡಬಲ್ಲ ಸಮಾಜವಾದಿ ಪದ್ಧತಿಯಿಂದ ಮಾತ್ರ ಇದಕ್ಕೆ ಅಂತಿಮ ಪರಿಹಾರ ಸಾಧ್ಯ. ಆದರೆ, ಆ ದಿಸೆಯಲ್ಲಿ ಕೆಲವು ತುರ್ತಿನ ಕಾರ್ಯಕ್ರಮಗಳನ್ನು ಹಾಕಿಕೊಂಡು ಎಡ ಪ್ರಜಾಪ್ರಭುತ್ವ ಶಕ್ತಿಗಳನ್ನು ಬೆಳೆಸಿಕೊಂಡು ಸಾಕಷ್ಟು ಮುಂದುವರಿಯಲು ಪ್ರಯತ್ನಿಸುವುದು ಅಗತ್ಯವಿದೆ.

1. ಬಡತನದ ಬೇರು ಇರುವುದೇ ಗ್ರಾಮೀಣ ಪ್ರದೇಶಗಳಲ್ಲಿರುವ ಆಸ್ತಿ ಆದಾಯಗಳ ವಿತರಣೆಯಲ್ಲಿನ ಅಸಮಾನತೆ. ಇದನ್ನು ಹೋಗಲಾಡಿಸಲು, ಮೊತ್ತಮೊದಲು ಭೂಮಿತಿ ಕಾಯ್ದೆಯ ಎಲ್ಲಾ ನ್ಯೂನತೆಗಳನ್ನು ಕಿತ್ತುಹಾಕಿ, ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಬೇಕು. ಹೆಚ್ಚುವರಿ ಭೂಮಿಯನ್ನೂ, ಸರಕಾರದ ವ್ಯವಸಾಯಯೋಗ್ಯ ಭೂಮಿಯನ್ನೂ ಭೂರಹಿತ ಕೃಷಿಕಾರ್ಮಿಕರಿಗೆ ಮರು ವಿತರಣೆ ಮಾಡಬೇಕು. ಹರಿಜನ-ಗಿರಿಜನರಿಗೆ ಹೆಚ್ಚಿನ ಆದ್ಯತೆ ಕೊಡಬೇಕು. ನೀರಾವರಿ, ವಿದ್ಯುತ್ ಸೌಕರ್ಯಗಳಿಂದ ಹೆಚ್ಚು ಭೂಮಿಯನ್ನು ವ್ಯವಸಾಯಕ್ಕೆ ಬಳಸಬೇಕು. ಒಂದಕ್ಕಿಂತ ಹೆಚ್ಚು ಬೆಳೆ ತೆಗೆಯಬೇಕು. ಸಣ್ಣ ಹಿಡುವಳಿಗಾರರಿಗೆ ಸಾಲ, ಸಹಾಯ ಸೌಕರ್ಯಗಳನ್ನು ಒದಗಿಸಿ ಅವರ ಉತ್ಪಾದನೆ ಹೆಚ್ಚಿಸಲು ಸಹಕರಿಸಬೇಕು. ಅವರ ಬೆಳೆಗೆ ಯೋಗ್ಯ ಬೆಲೆ ನಿಗದಿಮಾಡಿ ಅವರ ಆದಾಯ ಹೆಚ್ಚುವಂತೆ ಮಾಡಬೇಕು. ಕೃಷಿ ಕಾರ್ಮಿಕರಿಗೆ ಯೋಗ್ಯ ಮಟ್ಟದಲ್ಲಿ ಕನಿಷ್ಟ ವೇತನ ನಿಗದಿ ಮಾಡಬೇಕು. ಅವರಿಗೆ ವಸತಿಸೌಕರ್ಯ ಒದಗಿಸಿ ಕೊಡಬೇಕು. ಗ್ರಾಮೀಣ ಜನರು ಕೆಲಸ ಇಲ್ಲದೆ ಪಟ್ಟಣಗಳಿಗೆ ವಲಸೆ ಹೋಗುವುದನ್ನು ನಿಲ್ಲಿಸಬೇಕು. 'ಕೆಲಸಕ್ಕೆ-ಕಾಳು' ಇತ್ಯಾದಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಬೇಕು. ಹಳ್ಳಿಯ ಬಡವರನ್ನು ಸಾಲದ ಭಾರದಿಂದ ಬಿಡುಗಡೆ ಮಾಡಬೇಕು.

2. ಕೃಷಿಕ್ಷೇತ್ರದಲ್ಲಿ ಸಾವಧಾನವಾಗಿಯಾದರೂ ಸಹಕಾರ, ಸಾಮೂಹಿಕ ವ್ಯವಸಾಯ ಪದ್ಧತಿಯನ್ನು ಜಾರಿಗೆ ತರಬೇಕು. ವ್ಯಾಪಾರ ವಹಿವಾಟುಗಳಲ್ಲಿ, ಸಾಲ ಸವಲತ್ತುಗಳನ್ನು ನೀಡುವುದರಲ್ಲಿ ಮಧ್ಯವರ್ತಿಗಳನ್ನು ಅಳಿಸಿಹಾಕಬೇಕು. ಕ್ರಮೇಣ ಕೃಷಿಕ್ಷೇತ್ರದಿಂದ ಜನರನ್ನು ಗುಡಿಕೈಗಾರಿಕೆ, ಸಣ್ಣ ಕೈಗಾರಿಕೆಗಳಲ್ಲಿ ತೊಡಗಿಸಬೇಕು.

3. ಪ್ರಾಥಮಿಕ ಶಿಕ್ಷಣ ಕಡ್ಡಾಯವಾಗಬೇಕು. ವಯಸ್ಕರ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು.

4. ಎಲ್ಲರಿಗೂ ಸಾರ್ವಜನಿಕ ಆರೋಗ್ಯ ಸೌಲಭ್ಯಗಳು, ಪೌಷ್ಟಿಕ ಆಹಾರ, ಕುಡಿಯಲು ಸ್ವಚ್ಛವಾದ ನೀರು, ಮಕ್ಕಳ ಪೋಷಣೆ, ತಾಯ್ತನದ ರಕ್ಷಣೆ-ಕುಟುಂಬ ಯೋಜನೆ, ನೈರ್ಮಲ್ಯ, ಇತ್ಯಾದಿಗಳು ದೊರಕುವಂತಾಗಬೇಕು.

5. ಕೆಲಸ ಮಾಡುವ ಹಕ್ಕು ಮೂಲಭೂತ ಹಕ್ಕು ಆಗಿರಬೇಕು. ಎಲ್ಲಾ ವಿಷಯಗಳಲ್ಲಿಯೂ ಗಂಡಸರಿಗೂ ಹೆಂಗಸರಿಗೂ ಸಮಾನ ಅವಕಾಶಗಳೂ ಸವಲತ್ತುಗಳೂ ಸಿಗಬೇಕು.

6. ಮದುವೆಯ ಪ್ರಾಯ ಹೆಚ್ಚಿಸಬೇಕು. ಶಿಕ್ಷಣ ಹಾಗೂ ಉದ್ಯೋಗಾವಕಾಶಗಳಿಂದ ಇದು ಸಾಧ್ಯವಾದೀತು.

7. ಕುಟುಂಬ ಯೋಜನೆಯ ಕಾರ್ಯಕ್ರಮಗಳನ್ನು ಹೆಚ್ಚು ಮಾನವೀಯತೆಯಿಂದ, ಪ್ರಜಾಸತ್ತಾತ್ಮಕವಾಗಿ, ಐಚ್ಛಿಕವಾಗಿ ಕಾರ್ಯಗತಗೊಳಿಸಬೇಕು. ಇದಕ್ಕೆ ರಾಷ್ಟ್ರೀಯ ಪ್ರಾಶಸ್ತ್ಯ ನೀಡಬೇಕು.

8. ಆರ್ಥಿಕ ಅಭಿವೃದ್ಧಿ ಕಾರ್ಯಗಳನ್ನೂ, ಸಮಾಜ ಕಲ್ಯಾಣ ಕಾರ್ಯಗಳನ್ನೂ ವಿಕೇಂದ್ರೀಕರಿಸಿ ಪಂಚಾಯತುಗಳ ಮೂಲಕ ಕಾರ್ಯಗತಗೊಳಿಸಬೇಕು.

[ಮುಗಿಯಿತು]

●

....ಫಿರಂಗಿ ಗುಂಡುಗಳನ್ನು ಕುರಿತು

[4ನೇ ಪುಟದಿಂದ]

ರುವ ಭಾವನೆಗಳನ್ನು ಅಕ್ಷರಶಃ ಹಾಗೂ ಕಾರ್ಯತಃ ಪಾಲಿಸುತ್ತಾರೆ ಎಂದು ಆಶಿಸುತ್ತೇವೆ. ಕಳೆದ ಎರಡು ವರ್ಷಗಳಲ್ಲಿ ಸಿ.ಪಿ.ಐ. ಹಾಗೂ ಸಿ.ಪಿ.ಐ.(ಎಂ) ನಡುವೆ ಸಹಕಾರ ಹಾಗೂ ಐಕ್ಯತೆಯ ಕ್ರಮಗಳ ಬಗ್ಗೆ ಮೆಚ್ಚುಗೆ ಸೂಚಿಸುತ್ತಾ ಅವರು ಬರೆಯುತ್ತಾರೆ- "ನಾವು ಭೂತಕಾಲದ ವಿವಾದಗಳಲ್ಲಿ ಹೂತುಹೋಗಿ ನಮ್ಮ ಐಕ್ಯತೆಯ ಉದ್ದೇಶಕ್ಕೆ ಗಂಡಾಂತರ ತಂದೊಡ್ಡದಿರಬೇಕಾದರೆ ನಮ್ಮೆರಡೂ ಪಕ್ಷಗಳು ಈ ದಾರಿಯನ್ನನುಸರಿಸಬೇಕು. ಈ ಬಗ್ಗೆ ಚರಿತ್ರೆ ನಮ್ಮ ಭುಜಗಳ ಮೇಲೆ ದೊಡ್ಡ ಜವಾಬ್ದಾರಿಯನ್ನು ಹೇರಿದೆ".

ನಾವು ಈ ಆರೋಗ್ಯಕರ ಭಾವನೆಗಳನ್ನೇ ಪ್ರತಿಯಾಗಿ ವ್ಯಕ್ತಪಡಿಸುತ್ತೇವೆ ಹಾಗೂ ಸಿ.ಪಿ.ಐ.ನ ನಾಯಕರು ಸಿ.ಪಿ.ಐ. ಮತ್ತು ಸಿ.ಪಿ.ಐ.(ಎಂ)ನ ಸೇನಾನುಚರನಾಗಿದೆಯೆಂಬ ಡಾಂಗೆಯ AICPಯ ವಿಷಮಯ ಹಾಗೂ ಉದ್ರೇಕಕಾರೀ ಅಪಪ್ರಚಾರಕ್ಕೆ ಬಲಿಯಾಗುವುದಿಲ್ಲವೆಂದು ಮನಃಪೂರ್ವಕವಾಗಿ ಆಶಿಸುತ್ತೇವೆ.

○

ವಾರ್ಷಿಕ ಮಹಾಸಭೆ

ಎಸ್. ಕೆ. ವೀವರ್ಸ್ ಯೂನಿಯನ್ನಿನ 42ನೇ ವಾರ್ಷಿಕ ಮಹಾಸಭೆಯು 8-6-81ರಂದು ಮಂಗಳೂರಿನಲ್ಲಿ ಸಂಘದ ಅಧ್ಯಕ್ಷ ಕೆ. ತಿಮ್ಮಪ್ಪ ಅವರ ಅಧ್ಯಕ್ಷತೆಯಲ್ಲಿ ಸೇರಿತ್ತು.

ಯೂನಿಯನ್ನಿನ ಕಾರ್ಯದರ್ಶಿ ಪೂವಪ್ಪ ಸಾಲಿಯಾನರು ವಾರ್ಷಿಕ ವರದಿಯನ್ನು ಮಂಡಿಸಿದರು. ಖಜಾಂಚಿ ಕೆ. ಮಾರಪ್ಪ ಲೆಕ್ಕಪತ್ರ ಮಂಡಿಸಿದರು. ಬೆಲೆಏರಿಕೆ ಮೊದಲಾದ ಸಮಸ್ಯೆಗಳಿಗೆ ಸಂಬಂಧಿಸಿದಂತೆ ನಿರ್ಣಯಗಳನ್ನು ಸಭೆಯು ಅಂಗೀಕರಿಸಿತು.

ಪ್ರಸ್ತುತ ವರ್ಷಕ್ಕೆ ಈ ಕೆಳಕಂಡವರನ್ನು ಪದಾಧಿಕಾರಿಗಳಾಗಿ ಚುನಾಯಿಸಲಾಯಿತು.

ಕಾಂ. ಕೆ. ತಿಮ್ಮಪ್ಪ (ಅಧ್ಯಕ್ಷ), ಕಾಂ. ಕೆ. ಮೂಸಬ್ಬ ಮತ್ತು ಕೆ. ಸೀತಾರಾಮ (ಉಪಾಧ್ಯಕ್ಷರು), ಕೆ. ಪೂವಪ್ಪ ಸಾಲಿಯಾನ್ (ಪ್ರಧಾನ ಕಾರ್ಯದರ್ಶಿ), ಎಂ. ಕೃಷ್ಣಶೆಟ್ಟಿ ಮತ್ತು ಲಕ್ಷ್ಮಣ (ಸಹಕಾರ್ಯದರ್ಶಿಗಳು), ಕೆ.ಮಾರಪ್ಪ (ಕೋಶಾಧಿಕಾರಿ) ಈ ಮೊದಲಾದವರು.

●

ಇಬ್ರಾಹಿಂರ ರಾಜೀನಾಮೆಗೆ ಒತ್ತಾಯಿಸಿ ಬಹಿರಂಗ ಸಭೆ, ಮತಪ್ರದರ್ಶನ

ತುಮಕೂರು

ಕ್ರಿಮಿನಲ್ ಅಪಾದನೆಗೆ ಒಳಗಾಗಿರುವ ಸಚಿವ ಇಬ್ರಾಹಿಂರನ್ನು ಸಂಪುಟದಿಂದ ವಜಾಮಾಡಬೇಕೆಂದು ಒತ್ತಾಯಿಸಿ 29-6-81 ರಂದು ನಗರದ ಸಾವಿತ್ರಮ್ಮ ಕಲ್ಯಾಣ ಮಂದಿರದಲ್ಲಿ ಭಾರಿ ಜನಸ್ತೋಮವನ್ನು ಉದ್ದೇಶಿಸಿ ಕಾಂಗ್ರೆಸ್, ಸಿ. ಪಿ. ಐ. (ಎಂ), ಬಿ. ಜೆ. ಪಿ., ಜನತಾಪಕ್ಷಗಳ ಮುಖಂಡರು ಮಾತನಾಡಿದರು.

ಕಾಂಗ್ರೆಸ್‌ನ ಡಿ. ಬಿ. ಚಂದ್ರೇಗೌಡ, ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕಾಂ. ಸೂರ್ಯನಾರಾಯಣರಾವ್, ಬಿ. ಜೆ. ಪಿ.ಯ ಎ. ಕೆ. ಸುಬ್ಬಯ್ಯ, ಜನತಾಪಕ್ಷದ ಚಂದ್ರಶೇಖರರವರು ಮಾತನಾಡಿ ಇಬ್ರಾಹಿಂ ಹಗರಣವನ್ನು ಸಭಿಕರಿಗೆ ವಿವರಿಸಿದರು. ಇಬ್ರಾಹಿಂರನ್ನು ಸಮರ್ಥಿಸಿಕೊಳ್ಳುತ್ತಿರುವ ಮುಖ್ಯಮಂತ್ರಿಯನ್ನು ಉಗ್ರವಾಗಿ ಖಂಡಿಸಿದರು.

ಆರಂಭದಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಶ್ರೀ ಭಾಸ್ಕರಪ್ಪ ಸ್ವಾಗತಿಸಿದರು. ಸಭೆಯಲ್ಲಿ ಕಾಂಗ್ರೆಸ್‌ನ ಶ್ರೀ ನಾರಾಯಣ, ಜನತಾದ ಶ್ರೀ ಲಕ್ಷ್ಮೀನರಸಿಂಹಯ್ಯ, ಬಿ. ಜೆ. ಪಿ.ಯ ರಾಜಾಚಾರ್, ಸಿ. ಪಿ. ಐ. (ಎಂ)ನ ಕಾಂ. ಕೆ. ಆರ್. ನಾಯಕ್, ಟಿ.ಎಲ್. ತಿಮ್ಮಪ್ಪ, ಎಸ್. ಎಫ್. ಐ.ನ ಆರ್. ರವೀಂದ್ರ ನಾಯಕ, ಕಾಂಗ್ರೆಸ್ ಯುವಜನ ವಿಭಾಗದ ಕೃಷ್ಣೇಗೌಡ ಉಪಸ್ಥಿತರಿದ್ದರು.

ಸಭೆಯ ಅಧ್ಯಕ್ಷತೆಯನ್ನು ಶಾಸಕ ಶ್ರೀ ಮಲ್ಲಿಕಾರ್ಜುನಯ್ಯ ವಹಿಸಿದ್ದರು.

ಬಿಜಾಪುರ

ಮಹಿಳೆಯ ಮಾನಭಂಗ ಮತ್ತಿನ್ನಿತರ ಗಂಭೀರ ಆರೋಪಗಳಿಗೆ ಈಡಾದ ಮಂತ್ರಿ ಇಬ್ರಾಹಿಂರನ್ನು ಮಂತ್ರಿಮಂಡಲದಿಂದಕಿತ್ತೊಗೆಯಬೇಕೆಂದೂ, 29 ವಿರೋಧ ಪಕ್ಷದ ಸದಸ್ಯರನ್ನು ವಿಧಾನಸಭೆಯಿಂದ ಹೊರಹಾಕಿದ್ದನ್ನು ಖಂಡಿಸಿ ಬಿಜಾಪುರದಲ್ಲಿ 26-6-81 ರಂದು ಬಹಿರಂಗ ಸಭೆ ನಡೆಯಿತು.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ, ಭಾರತ ಕಮ್ಯೂನಿಸ್ಟ್ ಪಕ್ಷ, ಜನತಾ, ಕಾಂಗ್ರೆಸ್ ಮೊದಲಾದ ಪಕ್ಷಗಳ ಸುಮಾರು 50 ಜನರು ನಗರದ ಗಾಂಧೀಚೌಕದಲ್ಲಿ ಧರಣಿ ಸತ್ಯಾಗ್ರಹ ನಡೆಸಿದರು. ಸಂಜೆ ಬಸವೇಶ್ವರ ಚೌಕದಲ್ಲಿ ಐ. ಸಿ. ನಾಗರಾಣ ವಕೀಲರ ಅಧ್ಯಕ್ಷತೆಯಲ್ಲಿ ನಡೆದ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಕಾಂ. ಎನ್. ಕೆ. ಉಪಾಧ್ಯಾಯ, ಭೀಮಸಿಕಲಾದಗಿ, ಪಾಯಣ್ಣವರ, ಚಂಚಲಕರ, ಲಾಯದಗುಂದಿ ಮೊದಲಾದವರು ಭಾಷಣ ಮಾಡಿ ಗುಂಡೂರಾವ್ ಸರಕಾರದ ನೀತಿಯನ್ನು ಖಂಡಿಸಿದರು. ಇಂದಿರಾ, ಗುಂಡೂರಾವ್ ಸರ್ವಾಧಿಕಾರದ ವಿರುದ್ಧ ಹೋರಾಡಲು ಕರೆನೀಡಿದರು.

ದೇಶಕ್ಕೆ ಯಾವುದೇ ರೀತಿಯ ಸೇವೆಸಲ್ಲಿಸದ ಸಂಜಯಗಾಂಧಿಯ ಪೋಸ್ಟ್ ಸ್ಟ್ಯಾಂಪನ್ನು ಪ್ರಿಂಟ್ ಮಾಡಿದ್ದನ್ನು ಖಂಡಿಸಿ. 60 ಪೈಸೆಗೆ ಮಾರಾಟವಾಗುವ ಸಂಜಯಗಾಂಧಿ ಪೋಸ್ಟ್ ಪ್ಯಾಕೇಟನ್ನು ಸಭೆಯಲ್ಲಿ ಸುಡಲಾಯಿತು.

ಬಿಜಾಪುರ ಜಿಲ್ಲಾ ರೈತಸಂಘದ ಅಧ್ಯಕ್ಷ ಕಾಂ. ಭೀಮಸಿಕಲಾದಗಿಯವರು ಹೇಳಿಕೆಯೊಂದನ್ನು ಹೊರಡಿಸಿ ಇಬ್ರಾಹಿಂರ ರಾಜೀನಾಮೆಗೆ ಒತ್ತಾಯಿಸಿದ್ದಾರೆ.

ರಾಯಚೂರು

6-7-81ರಂದು ಸಿ. ಪಿ. ಐ.(ಎಂ), ಜನತಾ, ಕಾಂಗ್ರೆಸ್ (ಯು) ಪಕ್ಷಗಳ ನೇತೃತ್ವದಲ್ಲಿ ರಾಯಚೂರ್ ಬಂದ್ ಮಾಡಲಾಗಿತ್ತು. ಬೆಳಿಗ್ಗೆ ರಾಜೇಂದ್ರ ಗಂಜ್ ವೃತ್ತದಿಂದ ಮೆರವಣಿಗೆ ಹೊರಡಿಸಲಾಗಿತ್ತು. ನಂತರ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಮನವಿ ಅರ್ಪಿಸಲಾಯಿತು.

ನಂತರ ಜಿಲ್ಲಾ ಕೋರ್ಟಿನ ಆವರಣದಲ್ಲಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಸಿ.ಪಿ.ಐ. (ಎಂ)ನ ಕಾಂ. ಚಂದ್ರಶೇಖರ ಬಾಳೆ. ಜನತಾದ ಅಮೀನ ರೆಡ್ಡಿ ಪಾಟೀಲ ಮತ್ತು ಕಾಂಗ್ರೆಸ್ (ಯು)ನ ಶ್ರೀಮತಿ ನಾಗಮ್ಮ ಮಾತನಾಡಿ ಇಬ್ರಾಹಿಂ ರಾಜೀನಾಮೆಗೆ ಒತ್ತಾಯಿಸಿದರು. ರಾಯರ ಸರಕಾರದ ವೈಖರಿಯನ್ನು ಖಂಡಿಸಿದರು.

ಈ ಬಂದ್ ಕಾರ್ಯಕ್ರಮಕ್ಕೆ ಸ್ಥಳೀಯ ಎಸ್. ಎಫ್. ಐ. ಮತ್ತು ಡಿ. ವೈ. ಎಫ್.ಐ. ಹಾಗೂ ಮಹಿಳಾ ಸಂಘಟನೆಗಳು ಬೆಂಬಲ ನೀಡಿದ್ದವು.

ಇಬ್ರಾಹಿಂರನ್ನು ಶಿಕ್ಷಿಸಬೇಕೆಂದು ಒತ್ತಾಯಿಸಿ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ರಾಯಚೂರು ಘಟಕದ ಕಾರ್ಯದರ್ಶಿಯವರು ಹೇಳಿಕೆ ಹೊರಡಿಸಿರುವರು.

ಶೃಂಗೇರಿ

ಜುಲೈ 1ರಂದು ಚಿಕ್ಕಮಗಳೂರು ಜಿಲ್ಲೆಯ ಶೃಗೇರಿಯ ಯುವಜನ ಸಂಘಟನೆ ಮತ್ತು ನಾಗರೀಕ ಸಮಿತಿಯವರ ನೇತೃತ್ವದಲ್ಲಿ ಬಂದ್ ಆಚರಿಸಲಾಯಿತು.

ಆರೋಪಿ ಸಚಿವ ಇಬ್ರಾಹಿಂರನ್ನು ವಜಾಮಾಡಬೇಕೆನ್ನುವ, ಶಾಸಕರ ಸಸ್ಪೆನ್ಷನನ್ನು ರದ್ದುಗೊಳಿಸಬೇಕೆನ್ನುವ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಮಡಿಕೇರಿ

ಜುಲೈ 8ರಂದು ಮಡಿಕೇರಿಯಲ್ಲಿ ಬೃಹತ್ ಸಾರ್ವಜನಿಕ ಸಭೆ ನಡೆಯಿತು. ಸಭೆಯನ್ನುದ್ದೇಶಿಸಿ ಕಾಂಗ್ರೆಸ್‌ನ ಶ್ರೀ ದೇವರಾಜ್ ಅರಸ್, ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕಾಂ. ಎಂ. ಕೆ. ಭಟ್ ಮತ್ತು ಬಿಜೆಪಿಯ ಎ. ಕೆ. ಸುಬ್ಬಯ್ಯ ಮಾತನಾಡಿದರು.

ನಾಗರಿಕ ಸಮಿತಿ ನೀಡಿದ್ದ ಕರೆಯ ಮೇರೆಗೆ ನಡೆದ ಯಶಸ್ವೀ ಬಂದ್ ನಂತರ ಈ ಬಹಿರಂಗ ಸಭೆ ನಡೆಯಿತು.

ಜನತೆಯ ವಿರುದ್ಧ ಸಮರ ಸಾರಿರುವ ಗುಂಡೂರಾವ್ ಸರಕಾರಕ್ಕೆ ಮುಂದುವರೆಯುವ ಹಕ್ಕು ಇಲ್ಲವೆಂದು ನುಡಿದ ಭಾಷಣಕಾರರು ಕಳ್ಳಸಾಗಾಣಿಕೆದಾರರನ್ನು, ವಂಚಕರನ್ನು, ಪುಂಡರನ್ನು, ಅತ್ಯಾಚಾರಿಗಳನ್ನು ರಕ್ಷಿಸುತ್ತಿರುವ ರಾವ್ ಸರಕಾರದ ವಿರುದ್ಧ ಹೋರಾಡಲು ಕರೆ ನೀಡಿದರು.

ಧಾರವಾಡ ಜಿಲ್ಲೆಯ ಹಾವೇರಿಯಲ್ಲಿ, ಕೋಲಾರ ಜಿಲ್ಲೆಯ ಬಾಗೇಪಲ್ಲಿಯಲ್ಲಿ ಯಶಸ್ವಿ ಬಂದ್ ಮತ್ತು ಬಹಿರಂಗ ಸಭೆಗಳು ನಡೆದ ವರದಿ ಬಂದಿವೆ.

○

ಮಂಗಳೂರು ಯಶಸ್ವಿಬಂದ್

8-7-81ರಂದು ಗುಂಡೂರಾವ್ ಸರಕಾರದ ಜನವಿರೋಧಿ ಧೋರಣೆಗಳನ್ನು ಪ್ರತಿಭಟಿಸಿ ಸಿ. ಪಿ. ಐ.(ಎಂ) ಮತ್ತು ಸಿ. ಪಿ. ಐ. ಪಕ್ಷಗಳ ನೇತೃತ್ವದಲ್ಲಿ ಮಂಗಳೂರು ಜಿಲ್ಲಾ ಬಂದ್ ಯಶಸ್ವಿಯಾಗಿ ನಡೆಯಿತು.

ಬಹಿರಂಗ ಸಭೆಗೆ ಮುನ್ನ ಮಂಗಳೂರು ನಗರದಲ್ಲಿ ಬೃಹತ್ ಮೆರವಣಿಗೆ ಹೊರಡಿಸಲಾಗಿತ್ತು. ಮೆರವಣಿಗೆಯಲ್ಲಿ ಅಪಾರ ಸಂಖ್ಯೆಯಲ್ಲಿ ಕಾರ್ಮಿಕರು, ನಾಗರಿಕರು, ಮಹಿಳೆಯರು ಪಾಲ್ಗೊಂಡಿದ್ದರು.

ನಂತರ ಮಂಗಳೂರಿನ ಪುರಭವನದಲ್ಲಿ ನಡೆದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಸಿ. ಪಿ. ಐ. (ಎಂ)ನ ಜಿಲ್ಲಾ ಕಾರ್ಯದರ್ಶಿ ಕಾಂ. ಕೆ. ಆರ್. ಶ್ರೀಯಾನ್ ವಹಿಸಿದ್ದರು. ಸಭೆಯನ್ನುದ್ದೇಶಿಸಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕಾಂ. ಪಿ. ರಾಮಚಂದ್ರರಾವ್, ಸಿ. ಪಿ. ಐ. ನ ಕಾಂ. ಸಿಂಪ್ಸನ್ ಸೋನ್ಸ ಮೊದಲಾದವರು ಮಾತನಾಡಿದರು.

"ವಿಧಾನಸಭೆಯಿಂದ ವಿರೋಧ ಪಕ್ಷಗಳನ್ನು ಉಚ್ಚಾಟನೆ ಮಾಡಿ ಸ್ವೇಚ್ಛಾಧಿಕಾರ ನಡೆಸುವ ಗುಂಡೂರಾವ್ ಸರಕಾರ, ಜನರ ಸಮಸ್ಯೆಗಳನ್ನು ಬಗೆಹರಿಸುವ ಮಾರ್ಗವನ್ನು ತ್ಯಜಿಸಿದೆ. ಹಾಗೂ ಶಕ್ತಿಯನ್ನು ಕಳಕೊಂಡಿದೆ. ಆದುದರಿಂದ ಆರೋಪಕ್ಕೆ ಒಳಗಾಗಿರುವ ಇಬ್ರಾಹಿಂರನ್ನು ಮಂತ್ರಿಮಂಡಲದಿಂದ ತಕ್ಷಣ ವಜಾ ಮಾಡಬೇಕೆಂದು, ವಿರೋಧ ಪಕ್ಷಗಳನ್ನು ವಿಧಾನಸಭೆಯಿಂದ ಅಮಾನತುಗೊಳಿಸಿರುವ ನಿರ್ಣಯ ವಾಪಸ್ಸು ತೆಗೆದುಕೊಳ್ಳಬೇಕೆಂದು" ಭಾಷಣಕಾರರು ಅಭಿಪ್ರಾಯಪಟ್ಟರು.

ಆರಂಭದಲ್ಲಿ ಕಾಂ. ಮೋನಪ್ಪಶೆಟ್ಟಿ ಸ್ವಾಗತಿಸಿದರು.

○

....ಕಳ್ಳಭಟ್ಟಿ ದುರಂತ

(1ನೇ ಪುಟದಿಂದ)

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸೆಕ್ರೆಟಾರಿಯೇಟ್ ಸದಸ್ಯ ಕಾಂ. ಎನ್. ಎಲ್. ಉಪಾಧ್ಯಾಯರು ಹೇಳಿಕೆಯೊಂದನ್ನು ಹೊರಡಿಸಿ ನಿಧನರಾದವರಿಗೆ ಸಂತಾಪ ಸೂಚಿಸಿದ್ದಾರೆ. ನೊಂದವರಿಗೆ ಎಲ್ಲ ಬಗೆಯ ನೆರವನ್ನು ನೀಡಲು ಮುಂದಾಗುವಂತೆ ಸರಕಾರಕ್ಕೆ ಒತ್ತಾಯಿಸಿದ್ದಾರೆ.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಪರವಾಗಿ ಕಾಂ. ಅನಂತರಾಂ, ಎಸ್. ಎಫ್. ಐ. ಪರವಾಗಿ ಕಾಂ. ರಾಜಣ್ಣ, ಯುವಜನ ಸಂಘಟನೆಯ ಪರವಾಗಿ ಕಾಂ. ಎಸ್. ಶಿವರಾಂ ಮೊದಲಾದವರು ಈ ದುರಂತ ಘಟನೆ ಕುರಿತು ಹೇಳಿಕೆ ಹೊರಡಿಸಿ ನಿಧನರಾದವರಿಗೆ ಸಂತಾಪ ಸೂಚಿಸಿದ್ದಾರೆ.

●

ರೈತಸಂಘದ ಜಿಲ್ಲಾ ಕಾರ್ಯಕಾರಿ ಸಮಿತಿ ಸಭೆ

ಕರ್ನಾಟಕ ಪ್ರಾಂತರೈತಸಂಘದ ಗುಲ್ಬರ್ಗಾ ಜಿಲ್ಲಾ ಘಟಕದ ಕಾರ್ಯಕಾರಿ ಸಮಿತಿಯ ಸಭೆಯು 29-6-81 ರಂದು ಗುಲ್ಬರ್ಗಾದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಕಾಮ್ರೇಡ್ ಅರುಣ್‌ಕುಮಾರ್ ಮನೋಕರ ವಹಿಸಿದ್ದರು. ಕಾಂ. ಕಲ್ಲಪ್ಪ ಕಿರಣಗಿಯವರು ಇತ್ತೀಚೆಗೆ ಮುವದತ್ತಿಯಲ್ಲಿ ನಡೆದ ಪ್ರಾಂತ ರೈತಸಂಘದ ರಾಜ್ಯ ಸಮಿತಿಯ ಸಭೆಯಲ್ಲಿ ಕೈಕೊಂಡ ತೀರ್ಮಾನದ ಬಗ್ಗೆ ಸಭೆಗೆ ವರದಿ ಒಪ್ಪಿಸಿದರು.

ಸಭೆಯಲ್ಲಿ ರೈತ ಸಮಸ್ಯೆಗಳ ಬಗ್ಗೆ ಮತ್ತು ರಾಜ್ಯದ ಪ್ರಸ್ತುತ ಪರಿಸ್ಥಿತಿಯ ಬಗ್ಗೆ ಚರ್ಚೆ ನಡೆದು ಕೆಳಕಂಡ ನಿರ್ಣಯಗಳನ್ನು ಕೈಕೊಳ್ಳಲಾಯಿತು.

1. ಆರೋಪಕ್ಕೊಳಗಾಗಿರುವ ಯೋಜನಾ ಮಂತ್ರಿ ಇಬ್ರಾಹಿಂರನ್ನು ಕೂಡಲೇ ಮಂತ್ರಿಮಂಡಲದಿಂದ ವಜಾ ಮಾಡಬೇಕು.

2. ಪ್ರಸ್ತುತ ಅಧಿವೇಶನದ ಅವಧಿ ಮುಗಿಯುವವರೆಗೆ 29 ವಿರೋಧಿ ಪಕ್ಷದ ಶಾಸಕರನ್ನು ಸಸ್ಪೆಂಡ್ ಮಾಡಿರುವುದು ಪ್ರಜಾಪ್ರಭುತ್ವ ವಿರೋಧಿ ಕ್ರಮವಾಗಿದೆ. ಅನೇಕ ಅನಾಹುತಗಳಿಗೆ ಕಾರಣರಾಗಿರುವ ಗುಂಡೂರಾವ್ ರಾಜೀನಾಮೆ ಕೊಡುವಂತೆ ಒತ್ತಾಯಿಸಲಾಯಿತು.

●

ಕೇಂದ್ರಸಮಿತಿಯ ಪತ್ರಿಕಾ ಹೇಳಿಕೆ

(1ನೇ ಪುಟದಿಂದ)

ಅಸ್ಸಾಂನಲ್ಲಿ

ಅಸ್ಸಾಂನಲ್ಲಿ ಮುಂದುವರೆಯುತ್ತಿರುವ ಪ್ರತ್ಯೇಕತಾವಾದೀ ಚಳವಳಿ, ಕಾಂಗ್ರೆಸ್(ಐ) ನಾಯಕರು ಅಧಿಕಾರದಲ್ಲಿರಲು ನಡೆಸುತ್ತಿದ್ದ ಕಸರತ್ತುಗಳು ಹಾಗೂ ದೇಶದ ಸಮಗ್ರತೆ ಮತ್ತು ಜನತೆಯ ಐಕ್ಯತೆಯ ದೃಷ್ಟಿಯಿಂದ ಅಸ್ಸಾಂನ ಸಮಸ್ಯೆಯನ್ನು ಪರಿಶೀಲಿಸುವಲ್ಲಿ ಕೆಲವು ವಿರೋಧ ಪಕ್ಷಗಳು ಸೋತಿರುವ ಬಗ್ಗೆ ಕೇಂದ್ರ ಸಮಿತಿ ಕಳವಳ ವ್ಯಕ್ತಪಡಿಸಿದೆ. ಸಿ.ಪಿ. ಐ(ಎಂ)ನ ರಾಜ್ಯ ಶಾಖೆ ಹಾಗೂ ಇತರ ಎಡ ಹಾಗೂ ಪ್ರಜಾಪ್ರಭುತ್ವವಾದೀ ಪಕ್ಷಗಳು ಅಸ್ಸಾಮೀ ಮಾತನಾಡುವ ಜನರಿಗೂ ಇತರ ಭಾಷೆಗಳನ್ನಾಡುವ ಜನರಿಗೂ ನ್ಯಾಯ ದೊರಕಿಸುವಂತಹ ನ್ಯಾಯಪೂರ್ಣ ರಾಜಕೀಯ ಪರಿಹಾರ ಪಡೆಯುವ ಹಾಗೂ ರಾಜ್ಯದ ಬಹುಸಂಖ್ಯಾತ ಮತ್ತು ಅಲ್ಪಸಂಖ್ಯಾತ ಜನತೆಯನ್ನು ಒಗ್ಗೂಡಿಸುವ ನಿಲುವನ್ನು ಮುಂದುವರಿಸುತ್ತವೆಯೆಂದು ಭರವಸೆ ವ್ಯಕ್ತಪಡಿಸಿದೆ.

[ಮುಂದುವರೆಯುವುದು]

ಚಂದಾ ವಿವರ

ಬಿಡಿ ಪ್ರತಿ	: 60ಪೈಸೆ
6 ತಿಂಗಳಿಗೆ	: 15ರೂ.
ವಾರ್ಷಿಕ ಚಂದಾ	: 30ರೂ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office : L-56, K. V. Temple Street, Sultanpet Bangalore-560 053. Phone-24154

EDITOR : M. K. BHAT